clauses 2 to 12, both inclusive, were added to the Bill.

CLAUSE 1 ETC.,

MR. SPEAKER.—The question is :

"That Clause 1, the Long Title the Preamble and the Enacting formula do stand part of the Bill"

The Motion was adopted

clause 1, the Long Title the Preamble and the Enacting formula were added to the Bill.

Motion to Pass

SRI K.H. RANGANATH.—Sir, I beg to move :

"That the Karnataka Ministers' Salaries Pensions and Allowances (Amendment) Bill, 1979 be passed"

MR. SPEAKER.—The question is :

"That the Karnataka Ministers' Salaries pensions and Allowances (Amendment) Bill, 1979 be passed

The Motion was adopted and the Bill was passed

Karnataka Command Areas Development Bill, 1979
Governor's Recommendation

MR. SPEAKER.—I have received the following message from the Governor of Karnataka.

"In pursuance of clause 3 of Art. 207 of the Constitution of India I Sri Govind Narain, Governor of Karnataka, do hereby recommend the Karnataka Command Areas Development Bill, 1979 to be considered by the Karnataka Legislative Assembly".

MR. SPEAKER.—The Minister for Power may move the Bill.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಈ ಬಿಲ್ಲನ್ನು ಈಗ ತೆಗೆದುಕೊಳ್ಳುವುದು ಬೇಡ. ಮಾನ್ಯ ಮುಖ್ಯಮಂತ್ರಿಗಳು ಬಂದಮೇಲೆ ಇದನ್ನು ತೆಗೆದುಕೊಳ್ಳೋಣ.

SRI K. H. SRINIVAS —This may be held back for the present.

MR. SPEAKER.—We will take up on some other day. Or let the discussion continue.

ಶ್ರೀ ಬಿ. ಭಾಸ್ಕರಶೆಟ್ಟಿ,—ಮಾನ್ಯ ಮಂತ್ರಿಗಳು ಒಪ್ಪುವುದಾದರೆ ಈವತ್ತೇ ತೆಗೆದುಕೊಳ್ಳುವುದಕ್ಕೆ ನನ್ನ ಅಡ್ಡಿ ಇಲ್ಲ.

† Sri K.H. SRINIVAS.—I beg to move :

"That the Karnataka Command Areas Development Bill 1979 be taken into consideration"

The question was proposed

Sir, this is an important piece of legislation. The Government is happy to bring it before this August House. This is also in a way a much awaited legislation. In fact, in the last session itself this Bill had been introduced; but on account of paucity of time, this House could not consider that. But at that point of time, even the Hon. Leader of the Opposition and other Members who were very much interested in this Bill had given the green signal to the Government to promulgate an ordinance if necessary and offered to consider the datails when it comes before the House to replace the ordinance. This only shows that how urgent is this legislation and I am glad that the Leader of the Opposition and many important members in the opposition had appreciated that this is an urgent legislation. Afterwards, the Government really intended to promulgate an ordinance; but on account of the fact that certain provisions of the ordinance needed clearance from the President of India. But by the time we got the clearance, we had almost decided to convene the Houses of Legislature to meet and as such the Govt. thought it not proper to promulgate the ordinance instead of introduced this Bill.

This House is very well aware that over a period of time on account ofgreat efforts on the part of the Government we have been able to create considerable irrigation potentials in the State. When we talk about irrigation usually, it meanr building, dams, and impounding of water But really, our attention should not be confined to that but the ultimate benefit accrued to theagriculturists and the State on account of having created such agricultural potential-should also be borne in mind. Hon. Members are very well aware that we build dams and even canals are dug, and all arrangements are made. But unfortunately, on account of several other reasons, the achkat which come under irrigation-if it is not developed, the people will not be benefitted On account of lack of development, of that area, which is technically described in this Bill as "command areas" the benefit of the project cannot be achieved. Those are the areas called command areas which come under achkat and ayakat of irrigation project. Unless extra efforts are made to see that the potential which is created is put to the ultimate use, mere building of dams and digging of canals will not achieve the objective. So far as Achkat of irrigation project is concerned, it is high time that we view every inch of land as a national means of production and every drop of water as national wealth. To overcome certain bottlenecks and to aim at an integrated development of the command area Government thought it fit to constitute what are known as Command Area Development Authorities. In fact in 1974, Government constituted three command area development authorities viz , Thungabhadra, Malapra-

bha and Ghataprabha and Cauvery Basin projects. Subsequently, government thought it fit to also constitute a separate command area development authority for the Upper Krishna Project in September 1977. But these command area development authorities were only creation of government orders and as such, they could not go a long way in the achievement of the objects but had only to confine themselves to play a role of a promotional nature in the integrated development of the command area by coordinating the activities of the various departments and institutions operating in the area and this sort of institutional set up which had been only backed by a government order did not invest enough authority in the so called command area development authority to deliver the goods and the government very soon realised that merely constituting development authorities under the aeges of a government order will not help and there is need to invest this authority with real statutority authority that would really enable them to deliver the goods. One of the main objectives of CADA as it is called is to see that there is a speedier land development work so that the land is rendered fit for irrigation and for growing crops but in the absence of suitable statutory authority vested in the command area development authority these CADAS were not really able to cope up with the land development in a satisfactory way. So, it was also necessary from the point of view of a systematic efficiently and speedy land development work that these CADAS should be invested with much more authority of a statutory nature And one more dimension which came up for consideration was in the command area was of course there are a number of financial institutions which help the farmers to avail loan assistance for undertaking land development but there are also a category of farmers who are described as eligible farmers who are willing to avail institutional finance and get loans from the financing banks in the normal course, there is the other category who are described as ineligible farmers the land belonging to whom will have to be left just high and dry because they do not avail this finance and the financial institutions are unable to advance any loans to them. So, government realised that it is necessary that the CADA should have an eligibility of its own to avail the institutional finance advances, utilise it for land development and also see that land is compulsorily developed; whether a particular farmer is willing or unwilling, it is absolutely necessary from the point of view of optimum utilisation of the irrigation potential that CADA should have both economic power and also the legislative power-rather a statutory power-for dealing with land development in a compulsory manner whenever a situation calls for such efforts.

ಶ್ರೀ ಪಂಪಾಪತಿ — ಅಧ್ಯಕ್ಷರೇ, ನಾವು ಈ ಸದನದಲ್ಲಿ ಎಲ್ಲಾ ಅಧಿಕಾರಿಗಳು ಕನ್ನಡದಲ್ಲಿಯೇ ಬರೆಯಬೇಕು, ಕನ್ನಡದಲ್ಲಿಯೇ ಮಾತನಾಡಬೇಕು, ಕನ್ನಡದಲ್ಲಿಯೇ ವ್ಯವಹಾರ ನಡೆಸಬೇಕು ಎಂದು ಕಾಯಿದೆ ಮಾಡುತ್ತೇವೆ. ಆದರೂ ಪ್ರತಿಯೊಬ್ಬರೂ ಇಂಗ್ಲೀಷಿನಲ್ಲಿ ಮಾತನಾಡುತ್ತಾರೆ ಏಕೆ ಎಂದು ಅರ್ಥವಾಗುತ್ತಿಲ್ಲಾ. ಮಾನ್ಯ ಅಧ್ಯಕ್ಷರು ಎಲ್ಲರಿಗೂ ಕನ್ನಡದಲ್ಲೇ ವ್ಯವಹರಿಸುವುದಕ್ಕೆ ಅಪ್ಪಣೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಂತ್ರಿಗಳು ತಮ್ಮ ಭಾಷಣವನ್ನು ಇಂಗ್ಲೀಷ್‌ನಲ್ಲಿ ಪ್ರಾರಂಭ ಮಾಡಿದ್ದಾರೆ, ಆದ್ದರಿಂದ ಇಂಗ್ಲಿಷ್‌ನಲ್ಲಿ ಮುಗಿಸಲಿ, ಅನಂತರ ಕನ್ನಡದಲ್ಲಿ ಉತ್ತರ ಹೇಳುತ್ತಾರೆ.

SRI K. H. SRINIVAS.—Sri, I will finish this in English and when I reply, I will reply in Kannada and make amends for my speech in English. For enabling CADA to borrow and lend money for the purpose of land development to the ineligible farmers, it has become necessary that the CADAS should be statutory bodies not just creation of Government orders. Even financial institutions have requested the government to re-establish command area authorities as statutory bodies and this is one of the overwhelming considerations why the government has come up with a legislation trying to invest this CADA with statutory framework and authority.

The main features of the Bill that I am commending for the consideration of this House are:

1. Formulation of schemes for the comprehensive development of command areas.

The command area development authorities themselves can formulate schemes and also operate the schemes. They need not wait at the doors of the Secretariat for doing this.

(2) Construction of field channels and field drains and ensuring proper maintenance of irrigation system under a pipe-outlet.

(3) Compulsory and systematic land development on a pipe-outlet basis with option to land-holders to develop lands themselves as per approved plan

(4) Compulsory and systematic land development on a pipe-out let basis with option to land-holders to develop lands themselves.

(5) Localisation of command areas and enforcement of cropping pattern.

(6) Alteration of field boundaries, wherever necessary, for systematic land development.

(7) Empowering the CADA to borrow and lend money necessary for the due discharge of its functions.

(8) Alround development of the farmers in the area in respec- of Agriculture, Sericulture, Animal Husbandry, Fisheries, Horticult ture, Farm Forestry, Communication and Co-operation.

(9) Constitution of a fund for the Authority. and (10) Provision for offences and penalties.

These are the salient features of the Bill and as I mentioned earlier, this is a very important piece of legislation which should go a long way in the development of command areas, that means to say in the optimum and maximum utilisation of every drop of water which is sought to be impounded in our irrigation projects. Infact, I am really sorry that I am constrained to have this important Bill considered at a point of time when unfortunately our friends on the Opposition side, most of them, are not there. But' Sir, they have also on a previous occasion as I mentioned earlier, had agreed that this is a very urgent measure and they had even given a green signal for the Government to promulgate an Ordinance and in view of the urgency and paucity of time, I had to bring this Bill before this August House-now and with these words, I commend this Bill for a thorough consideration of this August House.

† ಶ್ರೀ ವಿ. ವಿ. ಪತ್ತಾರ್ (ಜಮಖಂಡಿ).—ಮಾನ್ಯ ಅಧ್ಯಕ್ಷರೇ, ನೀರಾವರಿ ಪ್ರದೇಶಗಳ ಸಮಗ್ರ ಅಭಿವೃದ್ಧಿಗಾಗಿ ತಂದಿರುವಂತಹ ಈ ಮಸೂದೆಯನ್ನು ನಾನು ಸ್ವಾಗತ ಮಾಡುತ್ತೇನೆ. ನಾನು ಘಟಪ್ರಭಾ ನೀರಾವರಿ ಪ್ರದೇಶದಿಂದ ಬಂದಿರುವುದರಿಂದ ಅಲ್ಲಿ ನೀರಾವರಿಯಾಗತಕ್ಕ ಭೂಮಿಗಳು ಹಾಗೂ ರೈತರ ಸಮಸ್ಯೆಗಳು ಬಹುತೇಕ ಬಹಳ ದೊಡ್ಡ ಪ್ರಮಾಣದಲ್ಲಿವೆ ಎಂದು ಹೇಳಬಯಸುತ್ತೇನೆ. ನೀರಾವರಿಯಾಗಬೇಕೆನ್ನುವುದು ಸರ್ಕಾರದ ಮುಖ್ಯ ಯೋಜನೆ. ನೀರಾವರಿಯಿಂದ ನಾವು ಹೆಚ್ಚಿನ ಫಸಲನ್ನು ಬೆಳೆದುಕೊಳ್ಳಲು ಅವಕಾಶವಾಗುತ್ತದೆ. ಆದರೆ ಕೇವಲ ನೀರನ್ನು ಕೊಟ್ಟರೆ ರೈತನಿಗೆ ಬೆಳೆಯುವುದಕ್ಕೆ ಆಗುವುದಿಲ್ಲ; ಜೊತೆಗೆ ಸ್ವಲ್ಪ ಸಹಕಾರವೂ ಬೇಕು. ಕಮ್ಯಾಂಡ್‌ನಲ್ಲಿದ್ದಂತಹ ಭೂಮಿಯಲ್ಲಿ ತಗ್ಗು ತವರು ಇದೆ. ನೀರು ಸಿಕ್ಕುತ್ತಿಲ್ಲ ಸರಿಯಾಗಿ ಫೀಲ್ಡ್ ಚಾನಲ್‌ಮಾಡಿಲ್ಲ ರೈತನಿಗೆ ನೀರು ಮತ್ತು ಭೂಮಿ ಇದ್ದರೂ ಸಹ ಒಮ್ಮೊಮ್ಮೆ ಹಣದ ಅಭಾವದಿಂದ ಬೆಳೆತೆಗೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಇದಲ್ಲದೆ ಕೆಲವು ಸಮಸ್ಯೆಗಳು ಬಹಳ ದೊಡ್ಡ ಪ್ರಮಾಣದಲ್ಲಿ ರೈತನಿಗೆ ತೊಂದರೆಯನ್ನು ಮಾಡುತ್ತಿವೆ. ಉದಾಹರಣೆಗೆ ಹೇಳಬೇಕಾದರೆ ಸಂಬಂಧಪಟ್ಟ ಅಧಿಕಾರಿಗಳು ಯಾವಾಗ ನೀರು ಬೇಕೋ ಆವಾಗ ನೀರು ಬಿಡುವುದಿಲ್ಲ; ಯಾವಾಗ ಬೇಡವೋ ಆಗ ಬಿಡುತ್ತಾರೆ. ಇಂಥಹ ಅನೇಕ ಸಮಸ್ಯೆಗಳು ಈ ನೀರಾವರಿ ಪ್ರದೇಶದಲ್ಲಿ ಉಂಟಾಗಿವೆ. ಈ ಸಮಸ್ಯೆಗಳನ್ನೆಲ್ಲ ಸಮಗ್ರವಾಗಿ ಯೋಚಿಸಿ ಅವುಗಳಿಗೆ ಒಂದು ಪರಿಹಾರ ಕಂಡುಕೊಳ್ಳಬೇಕೆಂಬ ಉದ್ದೇಶದಿಂದ ಸರ್ಕಾರವು ಅತ್ಯುತ್ತಮವಾದ ಈ ಕಾಯಿದೆಯನ್ನು ತಂದಿದೆ. ಇದರಿಂದ ಈ ಸಮಸ್ಯೆಗಳು ಬಗೆಹರಿದ ಪಕ್ಷದಲ್ಲಿ ನಮ್ಮ ನೀರಾವರಿ ಪ್ರದೇಶದಲ್ಲಿ ಇರತಕ್ಕ ಬಹಳ ಜನರಿಗೆ ಅತಿದೊಡ್ಡ ಪ್ರಮಾಣದಲ್ಲಿ ಲಾಭವಾಗುತ್ತದೆಂಬ ಮಾತನ್ನು ಒತ್ತಿಹೇಳುತ್ತೇನೆ. ಮುಖ್ಯವಾಗಿ ಸಮಗ್ರ ಅಭಿವೃದ್ಧಿ ಇದ್ದರೂ ಕೂಡ ಹಲವಾರು ತಕರಾರುಗಳು ಇರುವುದು ಸ್ವಾಭಾವಿಕ. ಈ ಮಸೂದೆಯ 4ನೇ ಸೆಕ್ಷನ್‌ನ ಕಾಂಪೋಸಿಷನ್ ಆಫ್ ದಿ ಅಥಾರಿಟಿ ಎನ್ನುವುದರಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕೆಂದು ಹೇಳಬಯಸುತ್ತೇನೆ, ಅದರಲ್ಲಿ ನೋಡಿದಾಗ Chairman nominated by the State Government ಎಂಬುವವರು ಛೇರ್ಮನ್ ಆಗಿದ್ದಾರೆ; ಅವರನ್ನು ಸರ್ಕಾರದವರು ನಾಮಕರಣ ಮಾಡುತ್ತಾರೆ. ಅನಂತರ Five persons nominated by the State Government, at least two of whom shall be from amongst small farmers of that area ಮತ್ತು ಇನ್ನು ಉಳಿದವರು ಬ್ಯಾಂಕಿನವರು ಹಾಗೂ ಈ ಯೋಜನೆಗೆ ಸಂಬಂಧಪಟ್ಟ ಛೀಫ್ ಇಂಜಿನಿಯರ್, ರಿಜಿಸ್ಟ್ರಾರ್ ಆಫ್ ಕೋ-ಆಪರೇಟೀವ್ ಸೊಸೈಟೀಸ್, ಡೈರೆಕ್ಟರ್ ಆಫ್ ಟೌನ್ ಪ್ಲಾನಿಂಗ್, ಫೈನಾನ್ಸ್ ಕಮೀಷನರ್ ಇವರೆಲ್ಲ ಇದ್ದಾರೆ. ಆದರೆ ಇಲ್ಲಿ ಮುಖ್ಯವಾದ ಒಂದು ನ್ಯೂನತೆ ಕಂಡುಬರುವುದು ಏನೆಂದರೆ, ಜನತೆಯ ಪ್ರತಿನಿಧಿಗಳನ್ನು ಹಾಕಿಲ್ಲದೆ ಇರುವುದು. ಆಯಾಯ ಭಾಗದ ವಿಧಾನ ಸಭಾ ಸದಸ್ಯರನ್ನು ಹಾಕಿದರೆ ಕಾಂಪೋಸಿಷನ್ ಆಫ್ ದಿ ಅಥಾರಿಟಿ ಪರಿಪೂರ್ಣವಾಗುತ್ತದೆಂದು ಸಲಹೆ ಮಾಡುತ್ತೇನೆ. ಈಗ ಅಲ್ಲಿ

ಒಂದು ಕನ್‌ಸಲ್ಟೇಟೀವ್ ಕಮಿಟಿ ಎಂದು ಇದೆ. ಅವರಲ್ಲಿ ಕೆಲಸ ಮಾಡುವಾಗ ನೂರೆಂಟು ತೊಂದರೆಗಳು ಬರುತ್ತವೆ. ಅವನ್ನು ಬಗೆಹರಿಸುವಂತಹ ಅಧಿಕಾರ ಕೂಡ ಆ ಸಮಿತಿಗೆ ಇರುವುದಿಲ್ಲ. ಆದ್ದರಿಂದ ಅಲ್ಲಿ ಆಯಾಯ ಕ್ಷೇತ್ರದ ವಿಧಾನ ಸಭಾ ಸದಸ್ಯರುಗಳನ್ನು ನೇಮಕ ಮಾಡಬೇಕೆಂದು ಮಂತ್ರಿಮಣ್ಮ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ, 10ನೇ ಸೆಕ್ಷನ್ನಿನ ಫಂಕ್ಷನ್ಸ್ ಆಫ್ ದಿ ಅಥಾರಿಟಿಯಲ್ಲಿ ಇನ್ನೊಂದು ಕ್ಲಾಜ್ ಅನ್ನು ಹಾಕಬೇಕೆಂದು ವಿನಯ ಪೂರ್ವಕವಾಗಿ ಸಲಹೆ ಮಾಡುತ್ತೇನೆ. ಹಲವಾರು ಸಮಸ್ಯೆಗಳು ರೈತರಿಗೇನಾರುವಾಗ ಅವುಗಳನ್ನು ಸಮಿತಿಯು ಮುಂದಿಡುವುದು ಸ್ವಾಭಾವಿಕ. ಅಂಥ ಸಮಯದಲ್ಲಿ ಸಮಿತಿಯವರು redress that grievances of the people concerned with that irrigation area ಎನ್ನುವುದನ್ನು ಹಾಕಿದರೆ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬಲ್ಲದು ಎಂದು ಸಲಹೆ ಮಾಡುತ್ತೇನೆ. ಯಾವುದಾದರೂ ತೊಂದರೆ ಇದ್ದು ಅದನ್ನು ಸಮಿತಿಯು ಮುಂದೆ ಇಟ್ಟಾಗ ಸಮಿತಿಯವರು ಅದಕ್ಕೆ ತಕ್ಕ ಪರಿಹಾರವನ್ನು ಆ ಜನರಿಗೆ ಕೊಡಬೇಕೆಂಬುದು ಇದರ ಉದ್ದೇಶ. ಆದ್ದರಿಂದ ಈ ಸಲಹೆಯನ್ನು ಸರ್ಕಾರ ಒಪ್ಪುತ್ತದೆಂದು ನನ್ನ ಭಾವನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Sri C. M. ARMUGHAM (K.G.F.).—I am sorry Sir, I was not in my seat because I thought most of the hon. Members who are coming from the rural areas will take part in the discussion relating to this very important piece of legislation. As I said the other day, we will get inspiration if the Opposition is there and when there is no Opposition, Members feel that they can pass this Bill in five minutes and we may probably adjourn the House as early as possible. This important Bill, as the Hon. Chief Minister was saying the other day, is put into task for the first time. In this connection, I would like to say that several projects are coming up in our State costing more than Rs. 250 Crores.

2-00 P. M.

The Thungabhadra project costs Rs. 200 crores and there are several projects like Bhadra, Tunga and Upper Krishna. All these projects are very costly, costly in the sense it costs crores of rupees. At the same time, it has also increased the value of the lands under the Command Area. To put it in a nutshell, if an acre costs thousands of rupees before construction of these irrigation projects, after the construction it costs more than Rs- 20,000. And by this Command Area Legislation the Government will spend 7 to 8 thousands of rupees per acre, When this Bill becomes a law it will bring about not only regulation of the water supply but also improvement of these lands. So, I welcome this measure. At the same time, my submission is that you should help the land owners under the command area and improve the lands and make them rich. As I said, if they spend Rs. 8,000 per acre and if they own about 40 acres of land, it will cost about Rs. 3,20,000. Overnight he becomes rich, he is protected The life and land in the Common Area are very much secure and people who own lands are very much benefited. While constructing these

Irrigation projects, thousands of people who were landless, who were artisans and agricultural labourers were uprooted. When the construction of irrigation projects takes place, the problem of rehabilitation is not being thought of, Even now in this command area, rehabilition must form part and parcel of the lives of those uprooted. I am sorry to say that they have not taken up that measure and essentially you cannot neglect the people who were living once there and who are now evicted without rehabilitation. The Government, while doing so; have not thought of it. There are two points: one is, of course, regulating the water and improving the lands etc. At the same time, should you not think of improving the lives of the poor people? Whenever any scheme costing about 200 crores is taken up it is only those who own lands will be benefited, not the landless. The Government has spent crores and crores of rupees on irrigation projects. The benefit of it all goes to the land owners and not to the landless. By all our schemes, of course, the production may increase. The production of rice, ragi, wheat and all other essential commodities may increase but that does not mean that they will be supplied free of cost to the poor people. So, whenever a scheme is formulated it must be done to help and improve the living conditions of the general masses. Cluase 4 deals with the Composition of the authority and it says:

> "The authority shall consist of the following members, namely:-
> (a) a Chairman, nominated by the State Government;
> (b) five persons to be nominated by the State Government atleast two of whom shall be from amongst the small farmers of that area......"

I would suggest that the landless persons should also be included there. Of course, Government talk about the Scheduled Caste and Scheduled tribes and it has become a fashion of the day to talk like that. Why do you talk about the Scheduled Caste and the Scheduled tribes? They were prevented physically from entering into service or any business. They were also prevented from owning lands all these years. Nowadays they sanction two or three acres of land to them and that too dry land. Here, I would suggest that you must necessarily include at least two representatives from the Scheduled Castes, and Scheduled Tribes in the Command Area Authortiy. They will take care of the interests of the Scheduled caste and Scheduled tribes and other Minorities. The Government will do well to include the Scheduled Caste people while constituting the Command Area Authority. Otherwise, every authority goes in the hands of some other persons who sometimes do not take any interest to look after those who belong to the Scheduled Castes and Scheduled Tribes. There

must always adequate protection for the poor people. So, I would only appeal to the Government while constituting the Command Area Authority, while formulating certain schemes that they must formulate them in such a way as to improve and rehabilitate those who were uprooted from those areas.

† ಶ್ರೀ ಬಿ. ವಿ. ಕಕ್ಕಿಲಾಯ (ವಿಠಲ್) :— ಸ್ವಾಮಿ, ಈ ಒಂದು ಮಸೂದೆ ಬಹಳ ಆವಶ್ಯಕವಾದುದು ಎಂದು ಹೇಳುತ್ತೇನೆ. ಆದರೆ ಶ್ರೀಮಾನ್ ಆರ್ಮುಗಂರವರು ಹೇಳಿದ ಹಾಗೆ ಇದರಲ್ಲಿ ಪ್ರಾತಿನಿಧ್ಯ ಕೊಡುವಾಗ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಜನರಿಗೆ ಮಾತ್ರ ಅಲ್ಲ ಭೂಹೀನರಾದಂಥಾ ಕೃಷಿ ಕಾರ್ಮಿಕರಿಗೂ ಕೂಡ ಪ್ರಾತಿನಿಧ್ಯವನ್ನು ಕಮಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ಕೊಡುವುದು ಅಗತ್ಯ ಎಂದು ನಾನೂ ಕೂಡ ಸಮರ್ಥನೆ ಮಾಡುತ್ತೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್ :— ಹರಿಜನ ಮತ್ತು ಗಿರಿಜನರಿಗೆ ಇದರಲ್ಲಿ ಪ್ರಾತಿನಿಧ್ಯ ಕೊಡುವುದು ನಿರ್ವಿವಾದ ಪ್ರಶ್ನೆಯೇ ಸರಿ. ಅದು ಅಗತ್ಯ ಇದ್ದರೆ ಆ ಬಗ್ಗೆ ಅಗತ್ಯವಾದ ತಿದ್ದುಪಡಿಯನ್ನು ತರುತ್ತೇವೆ. ಆದರೆ ಇದನ್ನು ಸ್ಟ್ಯಾಚ್ಯೂಟ್ ಮಾಡಿದ ಮೇಲೆ ಇವರಲ್ಲೇ ಇರುವುದು ಒಳ್ಳೆಯದು ಎಂದು ಹೇಳುತ್ತೇನೆ. ಇದರಲ್ಲಿ ಹಾಗೆ ಇರಬೇಕು ಎಷ್ಟು ಇರಬೇಕು ಎನ್ನುವುದನ್ನು ಯೋಚನೆ ಮಾಡುತ್ತಿದ್ದೇವೆ. ಆದರೆ ಇದರಲ್ಲಿ ಭೂರಹಿತರಿಗೆ ಪ್ರಾತಿನಿಧ್ಯ ಕೊಡಬೇಕು ಎನ್ನುವುದಾದರೆ, ಒಂದು ವೇಳೆ ಅವರಿಗೆ ಪ್ರಾತಿನಿಧ್ಯ ಕೊಡುವುದಾದರೆ ಅವರಿಂದ ಇದಕ್ಕೆ ಯಾವರೀತಿ ಪ್ರಯೋಜನವಾಗುತ್ತದೆ ಎನ್ನುವುದನ್ನು ಮಾನ್ಯ ಸದಸ್ಯರು ತಿಳಿಸಿದರೆ ಸ್ವಲ್ಪ ಅರ್ಥ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ :— ಈವೊತ್ತು ಈ ಬಗ್ಗೆ ಅಥಾರಿಟಿಯನ್ನು ಏನು ಸೃಷ್ಟಿ ಮಾಡಿದ್ದೀರಿ ಇದು ಹಳ್ಳಿಗಳ ಸಮಗ್ರವಾದ ಬೆಳವಣಿಗೆಗೆ ಅವಕಾಶವಾಗಬೇಕು ಎನ್ನುವ ದೃಷ್ಟಿಯಿಂದ ಇದನ್ನು ಮಾಡಿದ್ದೀರಿ ಎಂದು ಭಾವಿಸುತ್ತೇನೆ. ಈವೊತ್ತು ಹಳ್ಳಿ ಪ್ರದೇಶದಲ್ಲಿರತಕ್ಕಂಥಾ ಎಲ್ಲಾ ಕೃಷಿಕರಿಗೂ ಕೂಡ ಇದರ ಪ್ರಯೋಜನ ಸಿಕ್ಕಬೇಕು ಅನ್ನುವ ದೃಷ್ಟಿಯಿಂದ ಇದನ್ನು ಮಾಡಿರುವುದರಿಂದ ಇದರ ಪ್ರಯೋಜನ ಯಾರಿಗೆ ಹೋಗಬೇಕು ಎನ್ನುವುದೇ ಇದರಲ್ಲಿರುವ ಮುಖ್ಯ ಪ್ರಶ್ನೆ. ಈವೊತ್ತು ಇದರ ಬಗ್ಗೆ ಯೋಚನೆ ಮಾಡುವುದಾದರೆ ಹಳ್ಳಿ ಪ್ರದೇಶದಲ್ಲಿರುವಂಥಾ ಕೃಷಿ ತೆರಿಗೆ ಬಹಳಷ್ಟು ಹಣ ಖರ್ಚು ಮಾಡುತ್ತಿದ್ದೀರಿ. ಬೇರೆ ಬೇರೆ ಯೋಜನೆಗಳ ಮೂಲಕ ಬೇರೆ ಬೇರೆ ಇಲಾಖೆಗಳ ಮೂಲಕ ಈ ಕೃಷಿಕರಿಗಾಗಿ ಬಹಳಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ. ಆದರೆ ಮಾನ್ಯ ಕೃಷಿ ಸಚಿವರು ಹಿಂದೆ ಬಡ್ಜೆಟ್ ಮೇಲೆ ಭಾಷಣ ಮಾಡಿದಾಗ ಈ ಬಗ್ಗೆ ಅಂಕಿಸಂಖ್ಯೆಗಳನ್ನು ಇಲ್ಲಿ ಕೊಟ್ಟರು. ತಮ್ಮ ಉದ್ದೇಶ ಏನು ಇದ್ದರೂ ಕೂಡ ಹಳ್ಳಿ ಪ್ರದೇಶದ ರೈತರಿಗೆ ಏನು ಸಹಾಯ ಮಾಡುತ್ತಿದ್ದೀರಿ, ಏನು ಹಣ ಖರ್ಚು ಮಾಡುತ್ತಿದ್ದೀರಿ ಅದರಲ್ಲಿ ದೊಡ್ಡ ಭಾಗದಷ್ಟು ಹಣ ಯಾರಿಗೆ ಹೋಗುತ್ತದೆ ಎಂದರೆ ಶ್ರೀಮಂತ ರೈತರಿಗೆ ಇನ್ನು ಉಳಿದ ಸ್ವಲ್ಪ ಭಾಗ ಮಧ್ಯಮ ವರ್ಗದ ರೈತರಿಗೆ ಹೋಗುತ್ತದೆ. ಅವರೇ ಸ್ವತಃ ಉತ್ಪಾದನೆ ಮಾಡಿ ಇದರ ಲಾಭವನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೇ ವಿನಾ ಮುಖ್ಯವಾದ ಕೃಷಿ ಕಾರ್ಮಿಕರು ಏನು ಇದ್ದಾರೆ ಅವರಿಗೆ ಇದರ ಪ್ರಯೋಜನ ಸಿಕ್ಕುತ್ತಾ ಇಲ್ಲ. ದೊಡ್ಡ ದೊಡ್ಡ ರೈತರು ಅದನ್ನು ಮಾರಾಟ ಮಾಡುವುದಕ್ಕೋಸ್ಕರವಾಗಿ ಉತ್ಪಾದನೆ ಮಾಡುತ್ತಾರೇ ವಿನಾ ಸ್ವಂತಕ್ಕಾಗಿ ಕೃಷಿ ಮಾಡುವ ಸಣ್ಣ ರೈತರಿಗೆ ಇದರಿಂದ ಏನೂ ಪ್ರಯೋಜನವಾಗುತ್ತಾ ಇಲ್ಲ. ಆದರೆ ನೀವು ಒದಗಿಸಿಕೊಡತಕ್ಕಂಥಾ ಎಲ್ಲಾ ಸಾಲ ಸೌಲಭ್ಯಗಳು ಮತ್ತು ಇತರೇ ಸೌಲಭ್ಯಗಳು ದೊಡ್ಡವರಿಗೆ ಹೋಗುತ್ತಾ ಇದೆಯೇ ವಿನಾ ಸಣ್ಣ ರೈತರಿಗೆ ಕೃಷಿ ಕಾರ್ಮಿಕರಿಗೆ ಹೋಗುತ್ತಾ ಇಲ್ಲ. ಆದುದರಿಂದ ಇದರ ಪರಿಣಾಮ ಈಗ ಏನಾಗಿದೆ ಎಂದರೆ ಹಳ್ಳಿ ಪ್ರದೇಶದಲ್ಲಿರುವ ಎಲ್ಲಾ ಭಾಗಗಳಲ್ಲೂ ಕೂಡ ಒಂದು ತರಹದ ಟೆನ್‌ಷನ್ ಉಂಟಾಗಿದೆ. ಅಂದರೆ ಒಂದು ತೀವ್ರತರವಾದ ವಾತಾವರಣ ಈರೀತಿ ನಿರ್ಮಾಣವಾಗಿದೆ.

ಅಲ್ಲಿರುವಂಥ ಶ್ರೀಮಂತರು ಶ್ರೀಮಂತರಾಗುತ್ತಾರೆ, ಸಾರ್ವಜನಿಕರಿಗೆ ಖರ್ಚು ಮಾಡುವಂಥ ಹಣದ ಹೆಚ್ಚಿನ ಅಂಶವನ್ನು ಅವರು ಪಡೆಯುವುದಕ್ಕೆ ಅವಕಾಶವಾಗುತ್ತದೆ, ಉಳಿದವರು ತಾವು ಕೊಡುವಂಥ ಜನತಾ ಹೌಸಿಂಗ್ ಸ್ಕೀಂಗಳು ೫ ಸೆಂಟ್ಸ್ ಲ್ಯಾಂಡ್ ಇಂಥಾದ್ದು ಏನು ಕೊಡುತ್ತೀರಿ ಅದನ್ನು ಮಾತ್ರ ಕೃಷಿ ಕಾರ್ಮಿಕರು ಪಡೆಯುತ್ತಾರೆ. ಆದರೆ ತಮ್ಮ ಈ ಒಂದು ಸ್ಕೀಂನಿಂದ ಅವರು ಹೆಚ್ಚಿನ ಪ್ರಯೋಜನ ಪಡೆಯುವುದಕ್ಕೆ ಆಗಲೀ ಅಥವಾ ಅವರ ಜೀವನದ ಮಟ್ಟವನ್ನು ಸುಧಾರಿಸುವುದಕ್ಕಾಗಲೀ

ಸಾಧ್ಯವಾಗುವುದಿಲ್ಲ. ಹಳ್ಳಿಯಲ್ಲಿರುವಂಥ ಕೃಷಿ ಕಾರ್ಮಿಕರ ಸರ್ವತೋಮುಖವಾದ ಏಳಿಗೆಯಾಗಬೇಕು ಎಂದರೆ, ವ್ಯವಸಾಯದ ಅಭಿವೃದ್ಧಿಯಾದಾಗ ಮಾತ್ರ ಇದು ಸಾಧ್ಯವಾಗುತ್ತದೆ. ಕೃಷಿ ಕಾರ್ಮಿಕರಿಗೆ ವೇತನದ ಭದ್ರತೆ ಇರಬೇಕು. ಈಗ ತಾವು ಎಂಪ್ಲಾಯ್‌ಮೆಂಟ್ ಅಫರ್ಮೇಷನ್ ಸ್ಕೀಂ ಎಂದು ಏನೋ ತಂದಿದ್ದೀರಿ, ಇವರ ಪ್ರಯೋಜನವೂ ಜನರಿಗೆ ಸಿಕ್ಕಬೇಕು. ಹಳ್ಳಿಯ ಬೆಳವಣಿಗೆಗೆ ತಾವು ಏನೇನು ಯೋಜನೆಗಳನ್ನು ಮಾಡಿದ್ದೀರಿ ಅವೆಲ್ಲದರಲ್ಲಿಯೂ ಹಳ್ಳಿಯವರು ಭಾಗಿಗಳಾಗುವುದಕ್ಕೆ ಅವಕಾಶ ಮಾಡಿ ಅದರ ಪ್ರಯೋಜನ ಅವರಿಗೆ ಸಿಕ್ಕುವ ಹಾಗೆ ಮಾಡಿದರೆ ಮಾತ್ರ ತಮ್ಮ ಯೋಜನೆಯ ಉದ್ದೇಶ ಸಾಧನೆಯಾಗುತ್ತದೆ. ಹಳ್ಳಿಯವರಲ್ಲಿ ಕೆಲವರು ನಿರಕ್ಷರಿಗಳು ಇರಬಹುದು, ಇವರು ಮೇಧಾವಿಗಳ ಹಾಗೂ ಪಂಡಿತರುಗಳು ಮಾಡಿದಂಥ ಯೋಜನೆಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯವಾಗದೇ ಇರಬಹುದು, ಆದರೆ ಆ ವರ್ಗದವರ ಮಟ್ಟದಲ್ಲಿ ಈ ಯೋಜನೆಗಳು ಯಾವರೀತಿಯಲ್ಲಿ ಬಾಧಕವಾಗುತ್ತವೆ ಎನ್ನುವ ಒಂದು ಅನುಭವವಾದರೂ ಅವರಿಗೆ ಆಗುತ್ತದೆ. ಇದು ಆಗದೇ ಹೋದರೆ, ಯಾವ ವರ್ಗವನ್ನು ನೀವು ಮುಂದಕ್ಕೆ ತರಬೇಕು ಎಂದು ಹೇಳುತ್ತೀರೊ ಅವರು ಪ್ರಾತಿನಿಧ್ಯ ಇಲ್ಲದೆ, ಅವರ ಅಭಿಪ್ರಾಯಗಳನ್ನು ಬೇರೆಯವರು ಮಂಡಿಸುವುದಕ್ಕೆ ಸಾಧ್ಯವಾಗುವುದಿಲ್ಲ ನಮ್ಮ ದೇಶದ ಬೆಳವಣಿಗೆಯಲ್ಲಿ ಹಳ್ಳಿಯವರು ಭಾಗಿಗಳಾಗಬೇಕು, ಅವರ ಕೈಗೆ ಅಧಿಕಾರವನ್ನು ಕೊಡಬೇಕು ಎನ್ನುವ ವಿಚಾರವನ್ನು ನಾವೂ ತಿಳಿದುಕೊಂಡಿದ್ದೇವೆ. ಆದರೆ ಇಂಥ ಸಂದರ್ಭಗಳು ಬಂದಾಗ ಅವರಿಗೆ ಸರಿಯಾದ ಪ್ರಾತಿನಿಧ್ಯ ಕೊಟ್ಟರೆ ಅವರು ತಮ್ಮ ಕಾರ್ಯಗಳನ್ನು ತಿಳಿದುಕೊಂಡು ಆ ಪ್ರದೇಶದ ಬೆಳವಣಿಗೆಯಲ್ಲಿ ಭಾಗಿಗಳಾಗುವುದಕ್ಕೆ ಸಾಧ್ಯವಾಗುತ್ತದೆ.

ತಾವು ಕಮ್ಯಾಂಡ್ ಏರಿಯಾ ಬೆಳವಣಿಗೆಯನ್ನು ಮಾಡುವಾಗ ಕೆನ್ಯಾಲ್ಸ್, ಹೊಲದ ಹದ್ದುಬಸ್ತನ್ನು ಸರಿಯಾಗಿ ಮಾಡುವುದು, ನೀರಿನ ಸದುಪಯೋಗ ಮುಂತಾದುವುಗಳ ಬಗ್ಗೆ ಹೇಳಿದ್ದೀರಿ. ಇದರಲ್ಲಿ ತಾವು ಕೆಳಗಿನ ಜನಕ್ಕೆ ವಿದ್ಯಾಭ್ಯಾಸ, ಉದ್ಯೋಗಾವಕಾಶಗಳ ಬಗ್ಗೆ ಗಮನದಲ್ಲಿಟ್ಟುಕೊಂಡು ಈ ಎಲ್ಲಾ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ ಯಾವ ಉದ್ದೇಶದಿಂದ ತಾವು ಈ ಕಾರ್ಯಗಳನ್ನು ಮಾಡುತ್ತೀರೋ ಆ ಪ್ರದೇಶದ ಬೆಳವಣಿಗೆಯ ಉದ್ದೇಶ ಈಡೇರುವುದಿಲ್ಲ. ಅದರ ಬದಲು ಇದೂ ಒಂದು ಶೋಷಣೆಯ ಇನ್‌ಸ್ಟ್ರುಮೆಂಟ್ ಆಗುತ್ತದೆ. ಬಡವರನ್ನು ಇನ್ನಷ್ಟು ತುಳಿಯಲಿಕ್ಕೆ, ಶ್ರೀಮಂತರಿಗೆ ನೀವು ಕೊಡುವಂಥ ಸಿಂಹಪಾಲು ಪಡೆಯುವುದಕ್ಕೆ ಇದೂ ಒಂದು ಉಪಕರಣವಾಗುತ್ತದೆ. ಆದ್ದರಿಂದ, ಈ ಎಲ್ಲಾ ಕಾರಣಗಳಿಂದ ಅವರಿಗೆ ಭೂರಹಿತ ಕೃಷಿ ಕಾರ್ಮಿಕರಿಗೆ ಈ ಒಂದು ಅಥಾರಿಟಿಯಲ್ಲಿ ಪ್ರಾತಿನಿಧ್ಯ ಕೊಡಬೇಕಾದ್ದು ಅಗತ್ಯ ಎಂದು ನನಗನ್ನಿಸುತ್ತದೆ.

ಇನ್ನೊಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ಕೆಲವು ವರ್ಕ್‌ಷಾಪ್ಸ್‌ಗಳು ನಡೆಯುತ್ತಿವೆ ಕೆಲವು ಸಂಸ್ಥೆಗಳು ಅಂತರ ರಾಷ್ಟ್ರೀಯ ಸಂಸ್ಥೆಗಳಿಂದ ಹಣ ಪಡೆದು ಹಳ್ಳಿಯ ಪ್ರದೇಶವನ್ನು ಡೆವಲಪ್ ಮಾಡುತ್ತೇವೆಂದು ಹೇಳಿಕೊಂಡು ಅಸ್ತಿತ್ವಕ್ಕೆ ಬಂದಿರುತ್ತವೆ. ನಮ್ಮ ಬಂಟವಾಳದಲ್ಲಿಯೂ ಇಂಥ ಒಂದು ವರ್ಕ್ಸ್ ಷಾಪ್ ನಡೆಯಿತು, ಆದರೆ ಅಲ್ಲಿ ನಡೆದಿದ್ದುದು ಟಾಕಿಂಗ್ ಷಾಪ್. ಈ ವರ್ಕ್ಸ್ ಷಾಪ್‌ನಲ್ಲಿ ಯಾರು ಯಾರು ಬರುತ್ತಾರೆ, ಏನು ಇದರದ್ದು ಎಂದು ಕೇಳಿದರೆ, ಇದರಲ್ಲಿ ಎಫ್.ಎ.ಓ. ಇದೆ, ಕೆನಡಾದ ಸಿಡೋ ಸಂಸ್ಥೆ ಇದೆ, ಸ್ವಿಟ್ಜರ್ಲೆಂಡಿನ ಮ್ಯೆರಾಡಾ ಸಂಸ್ಥೆ ಇದೆ, ಇಂಥ ಸಂಸ್ಥೆಗಳು ಎಫ್.ಎ.ಓ. ಮೂಲಕ ಇಲ್ಲಿಯ ಸಂಸ್ಥೆಗಳಿಗೆ ಹಣವನ್ನು ಒದಗಿಸುತ್ತವೆ ಎಂದು ತಿಳಿಯಿತು. ಈ ಹಣ ಯಾವ ರೀತಿಯಲ್ಲಿ ವಿನಿಯೋಗವಾಗುತ್ತಿದೆ ಎನ್ನುವುದನ್ನು ಯಾರೂ ಹೇಳುವವರೂ ಇಲ್ಲ, ಕೇಳುವವರೂ ಇಲ್ಲ. ಈ ವರ್ಕ್‌ಷಾಪ್ ನಡೆದಾಗ ನಾನೂ ಒಂದು ಸೂಚನೆಯನ್ನು ಕೊಟ್ಟೆ. ಬಹುಶಃ ಅದು ರುಚಿಸಲಿಲ್ಲವೇನೋ ಆಮೇಲೆ ಅದು ಏನಾಯಿತೋ ಗೊತ್ತಾಗಲಿಲ್ಲ. ಇಂಥ ಯೋಜನೆಗಳನ್ನು ಕಾರ್ಯಗತ ಮಾಡುವಾಗ ವಿದೇಶಿ ಹಣವನ್ನು ಯಾವ ರೂಪದಲ್ಲಿಯೇ ಪಡೆಯಲಿ ಅದು ನಮ್ಮ ಗ್ರಾಮಗಳಲ್ಲಿ ಸರಿಯಾಗಿ ಉಪಯೋಗವಾಗಬೇಕು. ಈ ಹಣ ಪ್ರೈವೇಟ್ ಏಜನ್ಸಿಯ ಮೂಲಕ ವಿದೇಶಿ ಹಣಕ್ಕೆ ಹೊಂದಿಕೊಂಡಿರುವವರು ಹಳ್ಳಿಯ ಪ್ರದೇಶಗಳಲ್ಲಿ ಗೊಂದಲಗಳನ್ನುಂಟು ಮಾಡಿ ಹಳ್ಳಿಗಳನ್ನೇ ನಿರ್ನಾಮ ಮಾಡುವುದಕ್ಕೆ ಅವಕಾಶವಾಗಬಾರದು. ಈ ಕಮಾಂಡ್ ಏರಿಯಾ ಅಥಾರಿಟಿಯವರು ಹಳ್ಳಿಯ ಪ್ರದೇಶದ ಸರ್ವತೋಮುಖವಾದ ಬೆಳವಣಿಗೆಯ ಎಲ್ಲಾ ಅಧಿಕಾರವನ್ನು ತೆಗೆದುಕೊಳ್ಳುವ ಅಗತ್ಯ ಇದೆ. ಯಾವರೀತಿಯಿಂದಲೂ ಪ್ರೈವೇಟ್ ಏಜನ್ಸಿಗಳು ಏನೋ ಒಂದು ಕಾರ್ಯವನ್ನು ಮಾಡಲಿಕ್ಕೆ ಬಿಡದೆ, ಅವರ ಯೋಜನೆಗಳು ನಿಮ್ಮ ನಿಯಂತ್ರಣಕ್ಕೆ ಒಳಪಟ್ಟಿರುವಂತೆ ತಾವು ನೋಡಿಕೊಳ್ಳಬೇಕು. ಇದನ್ನು ಸಾಧಿಸಬೇಕಾದರೆ, ಏನು ಕಾರ್ಯಕ್ರಮಗಳನ್ನು ತಡೆದುಕೊಳ್ಳ

ಬೇಕು ಎನ್ನುವುದಕ್ಕೆ ನಾನು ಅಲ್ಲಿ ಒಂದು ಸೂಚನೆಯನ್ನು ಕೊಟ್ಟೆ, ಅದು ಅಂಗೀಕಾರವಾಯಿತೋ ಇಲ್ಲವೋ ಗೊತ್ತಿಲ್ಲ. ಹಳ್ಳಿಯ ಪ್ರದೇಶದ ಬೆಳವಣಿಗೆಯಲ್ಲಿ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್ ಸಹ ಇದೆ. ಇಲ್ಲಿ ಚುನಾಯಿತ ಪ್ರತಿನಿಧಿಗಳು ಇರುತ್ತಾರೆ. ನಮ್ಮ ರಾಜ್ಯದಲ್ಲಿ ಇರುವ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡುಗಳಲ್ಲಿ ಬೇರೆ ಕೆಲಸಗಳನ್ನು ಮಾಡುವುದಕ್ಕೆ ಹಣ ಇಲ್ಲ. ಹಣದ ಅನುಕೂಲ ವನ್ನು ಇವುಗಳಿಗೆ ಮಾಡಿಕೊಟ್ಟರೆ ಮಾತ್ರ ಹಳ್ಳಿಯ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯ ವಾಗುತ್ತದೆ. ಆದ್ದರಿಂದ ಯಾವ ಯಾವ ತಾಲ್ಲೂಕುಗಳಲ್ಲಿ ಕಮಾಂಡ್ ಏರಿಯಾ ಬರುತ್ತದೆ, ಅಲ್ಲಿ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನ ಚುನಾಯಿತ ಪ್ರತಿನಿಧಿಗಳಲ್ಲಿ ಒಬ್ಬರನ್ನೋ ಇಬ್ಬರನ್ನು ಸೇರಿಸಿ ಕೊಳ್ಳಬೇಕು. ಹಾಗೆಯೇ ಕೆಲವು ಪ್ರದೇಶಗಳಲ್ಲಿ ಮುನಿಸಿಪಾಲಿಟಿಗಳು ಬಂದರೆ ಅವುಗಳಲ್ಲಿರುವ ಅಧ್ಯಕ್ಷ ರನ್ನು ಸೇರಿಸಿಕೊಂಡು ಅವರು ಸಕ್ರೀಯವಾಗಿ ಭಾಗಿಯಾಗುವುದಕ್ಕೆ ಅವಕಾಶ ಮಾಡಿಕೊಡಬೇಕು. ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಕೆಳಗಿನ ಮಟ್ಟದಲ್ಲಿರುವ ಪಂಚಾ ಯತಿಯ ಮಟ್ಟದಿಂದ ಹಿಡಿದು ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನವರೆಗೂ ಮುನಿಸಿಪಾಲಿಟಿ ಗಳನ್ನು ಒಳಗೊಂಡು ಅವುಗಳ ಅಧ್ಯಕ್ಷರನ್ನು ಈ ಅಥಾರಿಟಿಯಲ್ಲಿ ಸದಸ್ಯರನ್ನಾಗಿ ತೆಗೆದುಕೊಂಡು ಅವರು ಸಕ್ರೀಯವಾಗಿ ಭಾಗಿಗಳಾಗುವುದಕ್ಕೆ ಅವಕಾಶ ಮಾಡಬೇಕು. ಇದನ್ನು ಮಾಡಿದರೆ ಮಾತ್ರ ಹೆಚ್ಚಿನ ಪ್ರಯೋಜನ ನಮ್ಮ ಹಳ್ಳಿಯವರಿಗೆ ಆಗುತ್ತದೆ. ಇದನ್ನು ಅಳವಡಿಸುವುದಕ್ಕೆ ತಾವು ಈ ಮಸೂದೆಗೆ ತಿದ್ದುಪಡಿಯನ್ನು ಸೂಚಿಸುತ್ತೀರಿ ಎಂದು ನಾನು ಭಾವಿಸುತ್ತೇನೆ.

ಅದೇ ರೀತಿಯಲ್ಲಿ ನಮ್ಮ ಅಸೆಂಬ್ಲಿ ಸದಸ್ಯರಿಗೂ, ಯೂನಿವರ್ಸಿಟಿಗಳಿಗೆ ಸದಸ್ಯರನ್ನು ಆರಿಸು ವಂತೆ ಆರಿಸಿ, ಒಬ್ಬಿಬ್ಬರನ್ನು ಈ ಅಥಾರಿಟಿಯಲ್ಲಿ ಹಾಕಿ ಅವರಿಗೂ ಪ್ರಾತಿನಿಧ್ಯ ಕೊಡಬೇಕು. ಕನ್‌ಸ್ಟೆಲ್‌ಟಿವ್ ಕಮಿಟಿಗಳಲ್ಲಿ ಅಸೆಂಬ್ಲಿ ಸದಸ್ಯರನ್ನು ಹಾಕಿದ್ದಾರೆ. ಈ ಕಮ್ಯಾಂಡ್ ಏರಿಯಾ ಅಥಾರಿಟಿ ಯಲ್ಲಿಯೂ ಒಬ್ಬಿಬ್ಬರು ಅಸೆಂಬ್ಲಿ ಸದಸ್ಯರನ್ನು ಏಕೆ ಹಾಕಬಾರದು ? ಇಂಥ ಒಂದು ಅವಕಾಶವನ್ನು ಇದರಲ್ಲಿ ಕಲ್ಪಿಸಿ, ಈ ಸದನದಿಂದ ಸದಸ್ಯರನ್ನು ಆಯ್ಕೆ ಮಾಡುವಂಥಾದ್ದನ್ನು ಮಾಡಿದರೆ ನಿಜವಾಗಿಯೂ ಸಾರ್ವಜನಿಕರಿಗೆ ಅವರ ಪ್ರತಿನಿಧಿಗಳ ಮೂಲಕ ಪ್ರಾತಿನಿಧ್ಯ ಕೊಟ್ಟು ಅವರು ಸಕ್ರೀಯವಾಗಿ ಇದರ ಕೆಲಸಕಾರ್ಯಗಳಲ್ಲಿ ಭಾಗಿಯಾಗುವುದಕ್ಕೆ ಅವಕಾಶವಾಗುತ್ತದೆ.

ಅಧಿಕಾರವನ್ನು ವಿಕೇಂದ್ರೀಕರಣ ಮಾಡಿದ್ದೇ ಆದರೆ, ಸಾರ್ವಜನಿಕರ ಸಹಭಾಗಿತ್ವವನ್ನು ತೆಗೆದು ಕೊಳ್ಳಲು ಅವಕಾಶವಾಗುತ್ತದೆಂದು ನನ್ನ ಅಭಿಪ್ರಾಯ. ಇದು ಬಹಳ ಮುಖ್ಯವಾದುದು. ಈ ಒಂದು ಪ್ರಯತ್ನವನ್ನು ನಮ್ಮ ದೇಶದಲ್ಲಿ ಬೇರೆ ಎಲ್ಲಿಯೂ ಮಾಡಿಲ್ಲವೆಂದು ನಾನು ಭಾವಿಸುತ್ತೇನೆ. ಮೊದಲನೆಯ ಬಾರಿಗೆ ಈ ಒಂದು ಪ್ರಯೋಗವನ್ನು ಇಲ್ಲಿ ತಾವು ಮಾಡುತ್ತಿದ್ದೀರಿ. ನೀರಾವರಿ ಪ್ರದೇಶ ಗಳಲ್ಲಿರತಕ್ಕಂಥ ಎಲ್ಲ ಜಮೀನುಗಳಿಗೂ ನೀರನ್ನು ಒದಗಿಸುತ್ತಿದ್ದೀರಿ. ಸಾಕಷ್ಟು ಗೊಬ್ಬರ ಹಾಗೂ ಬ್ಯಾಂಕಿನ ಸಾಲಗಳನ್ನು ಒದಗಿಸುವುದರ ಮೂಲಕ ಆ ಪ್ರದೇಶ ಆರ್ಥಿಕವಾಗಿ ಹಾಗೂ ಹಲವು ರೀತಿಯಲ್ಲಿ ಬೆಳವಣಿಗೆಯಾಗುವುದಕ್ಕೆ ತಾವು ಈ ಮೂಲಕ ಪ್ರಯತ್ನ ಮಾಡುತ್ತೀದ್ದೀರಿ. ಇದೆಲ್ಲವನ್ನೂ ಒಂದೇ ಕಡೆ ಕೇಂದ್ರೀಕರಿಸುವುದಕ್ಕೆತಾವು ಪ್ರಯತ್ನ ಮಾಡುತ್ತೀದ್ದೀರಿ. ಇಂತಹ ಒಂದು ಕೆಲಸ ಯೋಜನಬದ್ಧ ವಾಗಿ ಆಗಬೇಕು. ಇದರಲ್ಲಿ ಜನರೂ ಸಹ ಭಾಗಿಗಳಾಗುವಂತೆ ಮಾಡಬೇಕಾದರೆ ಸರ್ಕಾರದವರಗೆ ಅವರಿಗೂ ಸಹ ಯೋಗ್ಯವಾದ ಪ್ರಾತಿನಿಧ್ಯವನ್ನು ಕೊಡುವುದು ಒಳ್ಳೆಯದು. ಇದರಲ್ಲಿ ಭೂ ಹೀನರಿಗೆ, ಸಣ್ಣ ಹಿಡುವಳಿದಾರರಿಗೆ, ಕೃಷಿ ಕಾರ್ಮಿಕರಿಗೆ, ಹರಿಜನ ಗಿರಿಜನ ಪಂಗಡದವರಿಗೆ ಸೂಕ್ತ ಪ್ರಾತಿನಿಧ್ಯ ಕೊಡಬೇಕೆಂದು ಹೇಳುತ್ತೇನೆ. ಜೊತೆಗೆ ಗ್ರಾಮೀಣ ಬೆಳವಣಿಗೆ ದೃಷ್ಟಿಯಿಂದ ತಾವು ಯಾವುದೇ ಯೋಜನೆಯನ್ನು ಕೈಗೊಂಡರೂ ಸಹ ಸರ್ಕಾರದ ಎಲ್ಲ ಸಂಬಂಧಪಟ್ಟ ಇಲಾಖೆಗಳೂ ಸಹ ಈ ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಟಿಯವರು ಕೈಗೊಳ್ಳುವ ಯೋಜನೆಗೆ ಒಳಪಟ್ಟು ನಡೆ ಯುವಂತೆ ತಾವು ನೋಡಿಕೊಳ್ಳಬೇಕು. ಮುಖ್ಯವಾಗಿ ಹಣ ದುರ್ವಿನಿಯೋಗವಾಗದಂತೆ ನೋಡಿಕೊಳ್ಳ ಬೇಕು. ಈ ಅಥಾರಿಟಿಯ ಮೂಲಕ ಕೇವಲ ಕೆನಾಲ್ಸ್ ಮಾಡಿಸಿದರೆ ಸಾಲದು. ಅಲ್ಲಿಯ ರಸ್ತೆಗಳು ಇಂಪ್ರೂವ್ ಆಗಬೇಕಾಗುತ್ತದೆ. ಅದರ ಜೊತೆಗೆ ಗೃಹನಿರ್ಮಾಣ ಯೋಜನೆಗೆ ಪ್ರಾಮುಖ್ಯತೆ ಕೊಡ ಬೇಕಾಗುತ್ತದೆ, ವಿದ್ಯಾಭ್ಯಾಸ, ಆರೋಗ್ಯ ಹೀಗೆ ಪ್ರತಿಯೊಂದು ವಿಚಾರದಲ್ಲಿಯೂ ಹಳ್ಳಿಗಳ ಬೆಳವಣಿಗೆಯ ದೃಷ್ಟಿಯಿಂದ ಯೋಜನೆಗಳನ್ನು ಕೈಕೊಳ್ಳಬೇಕಾಗುತ್ತದೆ. ಆದಕಾರಣ ಎಲ್ಲವನ್ನೂ ಸಮಗ್ರವಾಗಿ ಯೋಚನೆ ಮಾಡಿ, ಒಂದು ಯೋಜನೆಯನ್ನು ತಯಾರು ಮಾಡಿ, ಯಾವ ಯಾವ ಇಲಾಖೆಯವರು ಯಾವ ಯಾವ ಕಾರ್ಯಗಳನ್ನು ಮಾಡಬೇಕು ಎಂಬುದನ್ನೆಲ್ಲಾ ನಿರ್ಧಾರ ಮಾಡಿ ಆ ಬಗ್ಗೆ ಮೇಲ್ವಿಚಾರಣೆ

ಮಾಡುವಂತಹ ಒಂದು ಅಧಿಕಾರವನ್ನು ಈ ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿಯವರಿಗೆ ಕೊಟ್ಟಿದ್ದೇ ಆದರೆ, ಹಳ್ಳಿಗಳ ಪ್ರದೇಶ ಇನ್ನು ಮುಂದೆ ಸರ್ವತೋಮುಖವಾಗಿ ಹಾಗೂ ಸಮತೂಕವಾಗಿ ಬೆಳವಣಿಗೆಯಾಗುತ್ತದೆಂದು ನನ್ನ ಅಭಿಪ್ರಾಯ. ಇದನ್ನು ಮಾನ್ಯ ಮಂತ್ರಿಗಳು ದಯಮಾಡಿ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಚೇರ್ಮನ್ ಶ್ರೀ ಎಂ. ವೀರಪ್ಪಮೊಯಿಲಿ ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

† ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಮಾನ್ಯ ಅಧ್ಯಕ್ಷರೇ, ಇಂತಹ ಒಂದು ಮಸೂದೆಯ ಅವಶ್ಯಕತೆ ಬಹಳ ಹಿಂದೆಯೇ ಇತ್ತು ಎಂದು ನನ್ನ ಅಭಿಪ್ರಾಯವಾಗಿದೆ. ಬಹಳ ಉಪಯುಕ್ತವಾದಂಥ ಈ ಒಂದು ಶಾಸನವನ್ನು ಇವೊತ್ತು ನಾವು ಜಾರಿಗೆ ಕೊಡುತ್ತಿದ್ದೇವೆ. ಆದರೆ ಸಂಸ್ಥಾನ ಮಟ್ಟದಲ್ಲಿ ಇಂತಹ ಒಂದು ಅಥಾರಿಟಿಯನ್ನು ಮಾಡಿದರೆ ಸಾಲದು, ಗ್ರಾಮಾಂತರ ಪ್ರದೇಶಗಳ ಮಟ್ಟದಲ್ಲಿ ತಾಲ್ಲೂಕುಗಳ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಇದರ ಶಾಖೆಗಳನ್ನು ತೆಗೆಯಬೇಕಾಗುತ್ತದೆ. ಇಲ್ಲದಿದ್ದರೆ ಈ ಒಂದ ಅಥಾರಿಟಿಯಿಂದ ಹೆಚ್ಚಿನ ಉಪಯೋಗವಾಗುವುದಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಇದು ರಾಜ್ಯಮಟ್ಟದಲ್ಲಿ ರಚನೆ ಮಾಡುತ್ತಿರುವ ಅಥಾರಿಟಿಯಲ್ಲ. ನಾಲ್ಕು ಏರಿಯಾಗಳಲ್ಲಿ ಇಂತಹ ಅಥಾರಿಟಿಗಳನ್ನು ರಚನೆ ಮಾಡಲಾಗಿದೆ. ಆಯಾ ಏರಿಯಾದ ಕೆಳಗೆ ಬರತಕ್ಕಂಥ ಎಲ್ಲ ಪ್ರದೇಶಗಳನ್ನು ಅಭಿವೃದ್ಧಿ ಮಾಡಿ, ಅದರ ಕಾರ್ಯ ನಿರ್ವಹಣೆ ಮಾಡಬೇಕೆಂಬ ಉದ್ದೇಶದಿಂದ ಇವುಗಳನ್ನು ರಚನೆ ಮಾಡಿರುವುದು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಪ್ರಸಕ್ತ ನಮ್ಮ ರಾಜ್ಯದ ಅನೇಕ ಕಡೆಗಳಲ್ಲಿ ನೀರಾವರಿ ಯೋಜನೆಗಳನ್ನು ತೆಗೆದುಕೊಂಡಿದ್ದರೂ ಕೂಡ, ಆ ಭಾಗಗಳಲ್ಲಿ ಕೆಲವು ಭಾಗಗಳು ನೀರಾವರಿಗೆ ಒಳಪಡದೆ ಹಾಳು ಬಿದ್ದಿರುವುದನ್ನು ನಾವು ದಿನನಿತ್ಯ ನೋಡುತ್ತೇವೆ. ಇದಕ್ಕೆ ಮುಖ್ಯ ಕಾರಣ ರೈತರಿಗೆ ಸಮಯಕ್ಕೆ ಸರಿಯಾಗಿ ಆರ್ಥಿಕ ಸಹಾಯ ಇಲ್ಲವೇ ವ್ಯವಸಾಯದ ಉಪಕರಣಗಳು ಸಿಗುವುದಿಲ್ಲ. ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ನೀರಾವರಿ ಯೋಜನೆಗಳನ್ನು ಕೈಕೊಂಡರೂ ಸಹ ಅದರ ಉಪಯೋಗ ಸಾಕಷ್ಟು ಜನ ರೈತರಿಗೆ ಸಿಗುತ್ತಿಲ್ಲ. ಇಂತಹ ಸನ್ನಿವೇಶದಲ್ಲಿ ಎಲ್ಲರಿಗೂ ಅನುಕೂಲ ಮಾಡಿಕೊಡಲು ಇಂತಹ ಒಂದು ಸಂಸ್ಥೆಯನ್ನು ನಿರ್ಮಾಣ ಮಾಡುವುದು ಸೂಕ್ತವೇ ಆಗಿದೆ. ಸಣ್ಣ ಸಣ್ಣ ರೈತರಿಗೆ ಬ್ಯಾಂಕುಗಳಿಂದ ಅಥವಾ ಸಹಕಾರಿ ಸಂಸ್ಥೆಗಳಿಂದ ಸಾಲ ಕಾಲಕ್ಕೆ ಸರಿಯಾಗಿ ಸಿಗುವುದಿಲ್ಲ ; ಈ ದೃಷ್ಟಿಯಿಂದ ಆಮೂಲಾಗ್ರವಾಗಿ ಎಲ್ಲ ಹಂತಗಳಲ್ಲಿಯೂ ಅಭಿವೃದ್ಧಿ ಕಾರ್ಯಗಳನ್ನು ಈ ಒಂದು ಅಥಾರಿಟಿಯ ಮೂಲಕ ಕೈಕೊಳ್ಳುವುದು ಅವಶ್ಯಕವಾಗಿದೆ ಎಂದು ಹೇಳುತ್ತೇನೆ. ಇಂತಹ ಕೆಲಸಗಳನ್ನು ಮಾಡುವಾಗ ಇದರಲ್ಲಿ ರಾಜಕೀಯಕ್ಕೆ ಅವಕಾಶವಿರುತ್ತದೆ. ಹೇಗೆಂದರೆ, ಒಬ್ಬ ರೈತ ತನ್ನ ಜಮೀನಿನಲ್ಲಿ ಪ್ರಗತಿಪರವಾಗಿ ಕೆಲಸ ಮಾಡುತ್ತಿದ್ದರೂ ಸಹ, ಅಂತಹ ರೈತನ ಜಮೀನನ್ನು ಸಹ ಆ ಕಮ್ಯಾಂಡ್ ಏರಿಯಾದಲ್ಲಿ ಸೇರಿಸಿಕೊಳ್ಳಲು ಇದರಲ್ಲಿ ಅವಕಾಶ ಏನಾದರು ಇದ್ದರೆ, ಅಂಥಾದ್ದನ್ನು ಸ್ಥಗಿತಗೊಳಿಸಬೇಕಾಗುತ್ತದೆ. ಚೆನ್ನಾಗಿ ಬೇಸಾಯ ಮಾಡುವವರ ಜಮೀನನ್ನು ಸಹ ತೆಗೆದುಕೊಂಡರೆ ಅಂತಹವರು ಸರ್ಕಾರದ ಮಟ್ಟದಲ್ಲಿ ಅಪೀಲ್ ಮಾಡಿಕೊಳ್ಳಲು ಇದರಲ್ಲಿ ಅವಕಾಶವಿದೆ ಇದಕ್ಕೆ ಬದಲು ಯಾರು ದುರ್ಬಲ ವರ್ಗದವರಿದ್ದಾರೆ, ಯಾರು ತಮ್ಮ ಜಮೀನನ್ನು ಸರಿಯಾಗಿ ಅಬಾದು ಮಾಡಿರುವುದಿಲ್ಲ ಅಂತಹವರ ಜಮೀನನ್ನು ತೆಗೆದುಕೊಂಡರೆ ಮಾತ್ರ ಒಳ್ಳೆಯದಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಆ ತರಹದ ಸಂದರ್ಭ ಇದರಲ್ಲಿ ಬರುವುದಿಲ್ಲ. ಯಾರಿಗೆ ತಮ್ಮ ಜಮೀನನ್ನು ಅಬಾದು ಮಾಡುವಂತಹ ಶಕ್ತಿ ಇಲ್ಲವೋ ಅಥವಾ ಕೆಲವು ಜನರಿಗೆ ಮನಸ್ಸು ಇರುವುದಿಲ್ಲವೋ ಅಂತಹ ಸಂದರ್ಭದಲ್ಲಿ ಮಾತ್ರ ಕಡ್ಡಾಯವಾಗಿ ತೆಗೆದುಕೊಂಡು ಅದನ್ನು ಅಭಿವೃದ್ಧಿಗೆ ಒಳಪಡಿಸುವುದಕ್ಕೆ ಇದರಲ್ಲಿ ಅವಕಾಶ ಮಾಡಿಕೊಂಡಿದ್ದೇವೆ. ಯಾರು ಚೆನ್ನಾಗಿ ವ್ಯವಸಾಯ ಮಾಡುತ್ತಿದ್ದಾರೆ ಅಂತಹವರ ಜಮೀನನ್ನು ತೆಗೆದುಕೊಳ್ಳುವ ಪ್ರಶ್ನೆಯೇ ಇದರಲ್ಲಿ ಇಲ್ಲ. ಅದು ಬಹುಶಃ ನಮ್ಮ ಕಲ್ಪನೆಗೆ ಮೀರಿದುದು. ನಿಮ್ಮ ಕಲ್ಪನೆಗೆ ಅಂಥಾದ್ದು ಏನಾದರು ಬಂದಿದ್ದರೆ, ಅದನ್ನು ಬಂದೋಬಸ್ತು ಮಾಡುವುದು ಕಷ್ಟ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸರ್ಕಾರದ ಉದ್ದೇಶವೇನೋ ಒಳ್ಳೆಯದಿರುತ್ತದೆ. ಆದರೆ ಇದನ್ನೆಲ್ಲಾ ನೋಡಿಕೊಳ್ಳುವಂತಹ ಸಂಸ್ಥೆಗೆ ಹೆಚ್ಚಿನ ಅಧಿಕಾರ ಕೊಟ್ಟಾಗ, ಆ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುವುದಕ್ಕೂ ಅವಕಾಶವಿರುತ್ತದೆ. ಯಾವ ಜಮೀನನ್ನು ಬೇಕಾದರೂ ತೆಗೆದುಕೊಳ್ಳಬಹುದೆಂದು ಇದರಲ್ಲಿ ಹೇಳಿರುವುದರಿಂದ, ಈ ಅಥಾರಿಟಿಯವರು ಯಾರ ಜಮೀನನ್ನು ಬೇಕಾದರೂ ನಾಳೆ ದಿವಸ ತಮ್ಮ ಅಧೀನಕ್ಕೆ ತೆಗೆದುಕೊಳ್ಳಬಹುದಾಗಿದೆ. ಆಗ ಅವರು ಸರ್ಕಾರದ ಮುಂದೆ ಬಂದು ತಮ್ಮ ಅಪೀಲನ್ನು ಹಾಕಿಕೊಳ್ಳಬೇಕಾಗುತ್ತದೆ. ಇದರ ಬದಲು ಯಾರಿಗೆ ತಮ್ಮ ಜಮೀನನ್ನು ಆಬಾದು ಮಾಡಲು ಶಕ್ತಿ ಇರುವುದಿಲ್ಲವೋ ಅಂತಹವರ ಜಮೀನನ್ನು ಮಾತ್ರ ತೆಗೆದು ಕೊಳ್ಳಲು ಅವಕಾಶವಿರಬೇಕೆಂದು ನಾನು ಪ್ರತಿಪಾದನೆ ಮಾಡುತ್ತಿದ್ದೇನೆ. ಶಾಸಕರನ್ನು ಸಹ ಇಂತಹ ಸಮಿತಿಗಳಲ್ಲಿ ಪ್ರತಿನಿಧಿಗಳನ್ನಾಗಿ ನೇಮಕ ಮಾಡಿದರೆ ಅಲ್ಲಿ ಒಳ್ಳೆಯ ಕೆಲಸಗಳಾಗುತ್ತವೆಂದು ಹೇಳುತ್ತೇನೆ. ಕೇವಲ ಅಧಿಕಾರಿಗಳನ್ನು ಮಾತ್ರ ಹಾಕಿದರೆ ಅಲ್ಲಿ ಅನ್ಯಾಯಗಳಾಗುತ್ತವೆ. ಅದೇ ಅಲ್ಲಿ ಜನತಾ ಪ್ರತಿನಿಧಿಗಳೂ ಸಹ ಇದ್ದರೆ, ಅವರು ಯಾವುದೇ ತೀರ್ಮಾನ ತೆಗೆದುಕೊಂಡರೂ ಸಹ ಜನರಿಗೆ ಉತ್ತರ ಕೊಡಬೇಕಾಗುತ್ತದೆ. ಒಳ್ಳೆಯ ಕೆಲಸ ಮಾಡದಿದ್ದರೆ, ನೋಡಿ ನೋಡಿ ಮನೆ ಮುರುಕು ಕೆಲಸ ಮಾಡಿದ್ದೀರಿ ಎಂದು ನಮ್ಮನ್ನು ಜನರು ಕೇಳುತ್ತಾರೆ. ಈ ದೃಷ್ಟಿಯಿಂದಲಾದರೂ ಸಹ ಇಂತಹ ಸಂಸ್ಥೆಗಳಲ್ಲಿ ಜನತಾ ಪ್ರತಿನಿಧಿಗಳು ಕಡ್ಡಾಯವಾಗಿ ಇರಬೇಕಾಗುತ್ತದೆ. ಈ ಶಾಸನಕ್ಕೆ ನನ್ನ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಾದಯ್ಯ (ಸಂತೆಮಾರಹಳ್ಳಿ).—ಮಾನ್ಯ ಅಧ್ಯಕ್ಷರೇ, ಈ ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿಯ ಮೂಲಕ ಯಾವುದಾದರೂ ಕೆರೆ ಕೆಳಗೆ ಬರುವ ಜಮೀನನ್ನ ಹಾಗೂ ನಾಲೆ ಕೆಳಗೆ ಬರುವ ಜಮೀನನ್ನು ವ್ಯಸಾಯಕ್ಕೆ ಯೋಗ್ಯವನ್ನಾಗಿ ಮಾಡಬೇಕು ಎಂಬುದು ಸರ್ಕಾರದ ಉದ್ದೇಶವಾಗಿದ್ದರೆ, ಸಾಮಾನ್ಯವಾಗಿ ಇಂತಹ ಏರಿಯಾದಲ್ಲಿರತಕ್ಕಂಥ ಹರಿಜನ ಮತ್ತು ಗಿರಿಜನ ವ್ಯವಸಾಯಗಾರರಿಗೆ ಯಾವ ಉಪಕಾರವೂ ಇದರಿಂದ ಆಗುವ ಸಂಭವವಿಲ್ಲ ಏಕೆಂದರೆ, ಕೆಲವು ಜನ ಹರಿಜನ ಮತ್ತು ಗಿರಿಜನರು ವ್ಯವಸಾಯ ಮಾಡುತ್ತಿರುತ್ತಾರೆ. ಬೇರೆಯವರು ನೂರು ಜನರಿದ್ದರೆ ಇಂತಹವರು ಒಬ್ಬರು ಅಥವಾ ಇಬ್ಬರು ಇರಬಹುದು. ಇಂತಹವರು ಏನಾದರು ಸಾಲ ತೆಗೆದುಕೊಂಡರೆ ಅದನ್ನು ವಾಪಸ್ಸು ಮಾಡುವ ಶಕ್ತಿ ಅವರಿಗೆ ಇರುವುದಿಲ್ಲ. ಮತ್ತು ತಮ್ಮ ಜಮೀನನ್ನು ಆಬಾದು ಮಾಡುವ ಶಕ್ತಿಯೂ ಅವರಿಗೆ ಇರುವುದಿಲ್ಲ. ಆದ್ದರಿಂದ ಅವರಿಗೆ ಸಾಲ ವಾಪಸ್ಸು ಮಾಡಲು ತುಂಬಾ ಕಷ್ಟವಾಗುತ್ತದೆ, ಈ ಕಾರಣದಿಂದ ಈ ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಸ್ಕೀಮ್‌ನಲ್ಲಿ ಕೊಡುವ ಅಥವಾ ಖರ್ಚಾಗುವ ಹಣದ ಶೇಖಡ ೫೦ ರಷ್ಟು ಹಣವನ್ನು ಅವರಿಗೆ ಸಬ್ಸಿಡಿ ರೂಪದಲ್ಲಿ ಕೊಟ್ಟು ಉಳಿದ ೫೦ ಪರ್ಸೆಂಟ್ ಹಣವನ್ನು ಅನೇಕ ಹೆಚ್ಚು ಕಂತುಗಳಲ್ಲಿ ಕಡಿಮೆ ಬಡ್ಡಿ ದರದಲ್ಲಿ ವಾಪಸ್ ಮಾಡುವುದಕ್ಕೆ ಅನುಕೂಲವಾಗುವಂತೆ ಕಾನೂನನ್ನು ಅಳವಡಿಸಿದರೆ ನಮ್ಮ ಪರಿಶಿಷ್ಟ ವರ್ಗದವರಿಗೆ ಸ್ವಲ್ಪ ಅನುಕೂಲವಾಗುತ್ತದೆಂದು ಮಾನ್ಯ ಮುಖ್ಯ ಮಂತ್ರಿಯವರನ್ನು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ.

೨–೩೦ ಪಿ. ಎಂ.

†ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಗಂಡಸಿ).—ಮಾನ್ಯ ಸಭಾಪತಿಗಳೆ, ಆರಿಸಿದ ನೀರಾವರಿ ಪ್ರಾಧಿಕಾರ ರಚನೆ ಮಾಡಬೇಕೆಂದು ಈ ಒಂದು ವಿಧೇಯಕವನ್ನು ನಮ್ಮ ಮುಂದೆ ಇಡಲಾಗಿದೆ. ಈ ವಿಧೇಯಕದ ಬಗ್ಗೆ ವಿರೋಧ ಪಕ್ಷದ ಮಾನ್ಯ ಸದಸ್ಯರು ಇದ್ದಿದ್ದರೆ ಕೆಲವು ಮಾತುಗಳನ್ನು ಹೇಳುತ್ತಿದ್ದರು. ಇದನ್ನು ಗಮನದಲ್ಲಿಟ್ಟುಕೊಂಡು ಅವರು ಹೇಳಬೇಕಾದ್ದನ್ನು ಊಹೆ ಮಾಡಿ ಇದನ್ನು ಆಚರಣೆಗೆ ತರುವಾಗ ಏನು ದೋಷ ಉಂಟಾಗಬಹುದು ಎನ್ನುವ ಮಾತುಗಳನ್ನು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಈ ವಿಧೇಯಕವನ್ನು ತಂದಿರುವುದು ಬಹಳ ಯೋಗ್ಯವಾದಂತಹ ಒಂದು ಕ್ರಮ. ಈ ರಾಷ್ಟ್ರದಲ್ಲಿ ಸರಾಸರಿ ಒಬ್ಬ ಮನುಷ್ಯನಿಗೆ ಮುಕ್ಕಾಲು ಎಕರೆ ಮಾತ್ರ ಜಮೀನು ಇದೆ. ಈ ರಾಷ್ಟ್ರದ ಜನಸಂಖ್ಯೆ ವರ್ಷಕ್ಕೆ ಒಂದು ಕೋಟಿ ೩೦ ಲಕ್ಷ ಜಾಸ್ತಿಯಾಗುತ್ತಿದೆ. ಉದ್ಯೋಗ ಅವಕಾಶ ಕೂಡ ಬಹಳ ಪರಿಮಿತಿಯಾಗಿದೆ. ಈ ಕಾರಣದಿಂದ ಈ ರಾಷ್ಟ್ರವನ್ನು ಬಲಾಢ್ಯ ಮಾಡಬೇಕಾದರೆ ಪ್ರತಿ ಇಂಚು ಭೂಮಿಯಲ್ಲೂ ಹೆಚ್ಚಿನ ಉತ್ಪಾದನೆ ಮಾಡುವುದಕ್ಕೆ ಯೋಗ್ಯ ಕ್ರಮವನ್ನು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳು ತೆಗೆದು

ಕೊಳ್ಳಬೇಕು. ಈ ಹಿನ್ನಲೆಯಲ್ಲಿ ರಾಜ್ಯ ಸರ್ಕಾರದವರು ನೀರಾವರಿ ಇರತಕ್ಕ ಪ್ರದೇಶದಲ್ಲಿ ಹೆಚ್ಚು ಉತ್ಪನ್ನ ಮಾಡಿ ಭೂಮಿಯನ್ನು ಹೆಚ್ಚಿನ ಫಲವತ್ತನ್ನಾಗಿ ಮಾಡುವ ಉದ್ದೇಶದಿಂದ ಈ ಒಂದು ವಿಧೇಯಕವನ್ನು ಈ ಸಭೆಯ ಮುಂದೆ ತಂದಿದ್ದಾರೆ. ಈ ವಿಧೇಯಕವನ್ನು ತಂದಿರುವುದು ಯೋಗ್ಯವಾದರೂ ಕೂಡ ಇದರ ಆಚರಣೆಯಲ್ಲಿ ಅನೇಕ ದೋಷಗಳಾಗತಕ್ಕಂತಹ ಸಂಭವವಿದೆ. ಮೊದಲನೆಯದಾಗಿ ನನಗೆ ಕಾಣುತ್ತಾ ಇರತಕ್ಕದ್ದು ಈ ಕೆಲಸ ಮಾಡುವಾಗ, ಇದನ್ನು ಆಚರಣೆಗೆ ತರುವಾಗ ಹಲವಾರು ಸಂಘ ಸಂಸ್ಥೆಗಳು, ಇಲಾಖೆಗಳು ಒಂದೇ ಕೆಲಸ ಮಾಡುವುದಕ್ಕೆ ನೇಮಿಸುವಂತಹ ಸಂದರ್ಭಗಳು ಬರುತ್ತವೆ. ಈ ವ್ಯವಸಾಯ ಅಭಿವೃದ್ಧಿಯ ಕೆಲಸವನ್ನು ವ್ಯವಸಾಯ ಇಲಾಖೆ ಮಾಡುತ್ತದೆ. ಅದರ ಜೊತೆಗೆ ಪಬ್ಲಿಕ್ ವರ್ಕ್ಸ್ ಇಲಾಖೆ ಕೂಡ, ಇರಿಗೇಷನ್ ಡಿಪಾರ್ಟ್‌ಮೆಂಟ್ ಕೂಡ ಮಾಡುತ್ತದೆ. ಇರಿಗೇಷನ್ ಆಕ್ಟಿನಲ್ಲಿರತಕ್ಕ ವಿಧಿಗಳನ್ನೇ ಪುನಃ ಇದರಲ್ಲಿ ಹೇಳಲಾಗಿದೆ. ಒಂದೇ ಕೆಲಸವನ್ನು ಪಬ್ಲಿಕ್‌ವರ್ಕ್ಸ್ ಇಲಾಖೆ ಮಾಡಬೇಕೆಂದು ನಿಯೋಜಿತವಾಗಿದೆ, ವ್ಯವಸಾಯ ಇಲಾಖೆ ಕೂಡ ಮಾಡಬೇಕೆಂದು ನಿಯೋಜಿತವಾಗಿದೆ. ಮತ್ತು ಸ್ಥಳೀಯ ಸಹಕಾರ ಸಂಘಗಳಿಗೂ ಕೂಡ ಈ ಕೆಲಸವನ್ನು ವಹಿಸಲಾಗಿದೆ. ಆದ್ದರಿಂದ ಈ ಕೆಲಸ ಮಾಡುವಾಗ, ಕಾರ್ಯಾಚರಣೆ ಮಾಡುವಾಗ ಹಲವಾರು ಸಂಸ್ಥೆಗಳು ಒಂದೇ ಕೆಲಸವನ್ನು ಮಾಡತಕ್ಕಂತಹ ಡೂಪ್ಲಿಕೇಟ್ ವರ್ಕನ್ನು ತಪ್ಪಿಸತಕ್ಕ ಕೆಲಸವನ್ನು ಮೊದಲನೆಯದಾಗಿ ನಾವು ಮಾಡಬೇಕಾಗಿದೆ. ಆರಿಸಿದಂತಹ ಪ್ರದೇಶಗಳಲ್ಲಿ ಪ್ರಾಧಿಕಾರ ಒಂದೇ ಸಮಸ್ತ ಕೆಲಸಗಳನ್ನು ಮಾಡತಕ್ಕ ಯೋಜನೆಯನ್ನು ಇಟ್ಟುಕೊಳ್ಳಬೇಕು. ಮತ್ತು ಈ ಅಧಿನಿಯಮ ಮತ್ತು ಇರಿಗೇಷನ್ ಆಕ್ಟಿಗೂ ಇರತಕ್ಕ ಒಂದು ಪರಸ್ಪರ ವಿರೋಧಗಳನ್ನು ತೊಡೆದುಹಾಕುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತೊಂದು ಅಂಶವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರೈತ ಈ ಭೂಮಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಸ್ವತಹ ಸಾಲವನ್ನು ತಂದು ಸ್ವತಹ ಖರ್ಚು ಮಾಡಿದರೆ ಏನು ಅವನಿಗೆ ಜವಾಬ್ದಾರಿ ಬೀಳುತ್ತದೆ, ಏನು ಖರ್ಚಾಗುತ್ತದೆ, ನನಗನಿಸುತ್ತದೆ ಅದನ್ನು ಪ್ರಾಧಿಕಾರದ ಮುಖಾಂತರ ಮಾಡಿಸಿದರೆ ಅದರ ನಾಲ್ಕರಷ್ಟು ಸಾಲದ ಭಾರ ರೈತನ ತಲೆಯಮೇಲೆ ಬೀಳುತ್ತದೆ. ಈ ವಿಧೇಯಕದ ೨೦ನೇ ಸೆಕ್ಷನ್ ಪ್ರಕಾರ ಜಮೀನು ಅಭಿವೃದ್ಧಿಗೆ ಆಗತಕ್ಕಂತಹ ಖರ್ಚಿನ ಜೊತೆಗೆ ಏನೇನೋ ಖರ್ಚುಗಳು ಅವನ ತಲೆಯಮೇಲೆ ಬೀಳುತ್ತವೆ. ಎಂದು ಕಾಣುತ್ತದೆ. ಇದರಲ್ಲಿ ಈ ರೀತಿ ಹೇಳಿದ Cost of survey, Supervision estab'ishment charges and any other amount as may be determined by the authority ಇದಕ್ಕೆ ಪ್ರತ್ಯೇಕ ಅಧಿಕಾರಿಗಳಿರುತ್ತಾರೆ. ಪ್ರತ್ಯೇಕವಾದ ಕೆಲಸ ಕಾರ್ಯಗಳನ್ನು ಮಾಡತಕ್ಕಂತಹ ನೌಕರ ವರ್ಗದವರು ಇರುತ್ತಾರೆ. ಇವರೆಲ್ಲಾ ಸೇರಿದರೆ ನೂರಾರು ಜನ ಆಗಬಹುದು, ನೂರಾರು ಜನ ಸಣ್ಣ ಮತ್ತು ದೊಡ್ಡ ಆಫೀಸರುಗಳು ಈ ಎಲ್ಲರ ಸಂಬಳ ಸಾರಿಗೆಗಳನ್ನೂ ರೈತನ ತಲೆಯಮೇಲೆ ಹಾಕತಕ್ಕಂಥದ್ದು ಈ ಒಂದು ಅಧಿನಿಯಮದಲ್ಲಿ ಇದೆ. ಸಾಮಾನ್ಯವಾಗಿ ಒಂದು ಎಕರೆ ಭೂಮಿ ಅಭಿವೃದ್ಧಿ ಮಾಡುವುದಕ್ಕೆ ಆತನು ಸ್ವತಹ ಮಾಡಿದಕ್ಕೆ ಒಂದು ಸಾವಿರ ರೂಪಾಯಿಗಳು ಖರ್ಚಾದರೆ ಈ ಅಧಿನಿಯಮದ ಪ್ರಕಾರ ನಾಲ್ಕು ಸಾವಿರ ರೂಪಾಯಿ ಖರ್ಚು ಬರುತ್ತದೆ. ಎಲ್ಲಾ ನೌಕರರ ಸಂಬಳ ಸಾರಿಗೆಗಳನ್ನು, ಮತ್ತು ಪ್ರಾಧಿಕಾರ ಸೂಚನೆ ಮಾಡತಕ್ಕಂತಹ ಸಮಸ್ತ ಖರ್ಚುಗಳನ್ನು ಆತನ ತಲೆಯಮೇಲೆ ಹಾಕತಕ್ಕಂತಹ ಒಂದು ಪ್ರಯತ್ನ ಇದರಲ್ಲಿದೆ. ಇದು ಬಹಳ ಮುಖ್ಯವಾದ ಅಂಶ ಭೂಮಿಗೆ ಖರ್ಚುಮಾಡತಕ್ಕಂತಹದ್ದು ಏನಿದೆಯೋ, ಭೂಮಿಯ ಅಭಿವೃದ್ಧಿಗೆ ಖರ್ಚುಮಾಡತಕ್ಕಂತಹದ್ದು ಏನಿದೆಯೋ ಅಷ್ಟನ್ನು ಅವನ ತಲೆಯಮೇಲೆ ಹಾಕುವುದು ಸೂಕ್ತ. ಎಲ್ಲಾ ಇಲಾಖೆಗಳೂ ಮಾಡತಕ್ಕಂತಹ ಖರ್ಚನ್ನು ರೈತನ ತಲೆಯಮೇಲೆ ಹಾಕುವುದು ಸೂಕ್ತವೇ ಎಂಬುದನ್ನು ಯೋಚನೆ ಮಾಡಬೇಕು. ಇದು ಒಂದು ಕಡೆ. ಮತ್ತೊಂದು ಕಡೆ ಬಲವಂತವಾಗಿ ಜಮೀನಿನ ಅಭಿವೃದ್ಧಿ ಮಾಡುತ್ತೇವೆಂದು ಹೇಳಿ ಆತನ ತಲೆಯ ಮೇಲೆ ಜಮೀನಿನ ಬೆಲೆಗಿಂತ ಹೆಚ್ಚಿನ ಭಾರವನ್ನು ಹೊರಿಸತಕ್ಕ ಕೆಲಸ ಆಗುತ್ತದೆ ಎಂದು ನನಗನಿಸುತ್ತದೆ. ಆದುದರಿಂದ ಈ ಅಧಿನಿಯಮವನ್ನು ಸೂಚನೆ ಮಾಡತಕ್ಕವರು ಸೂಕ್ತ ತಿದ್ದುಪಡಿಯನ್ನು ತರಬೇಕೆಂದು ನನ್ನ ಸಲಹೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇನ್‌ಎಲಿಜಿಬಲ್ ಫಾರ್ಮರ್ಸ್ ಅಭಿವೃದ್ಧಿಗೋಸ್ಕರ ಸಾಲ ಪಡೆದು ಅಭಿವೃದ್ಧಿ ಕೆಲಸವನ್ನು ಮಾಡುವಾಗ ಅದಕ್ಕೆ ಏನು ಖರ್ಚಾಗಿದೆ ಅದನ್ನೆಲ್ಲಾ ಅವನಿಂದ ಪಡೆದುಕೊಳ್ಳಬೇಕೆನ್ನುವ ಸಂದರ್ಭದಲ್ಲಿ ಒಂದು ವಿವರಣೆಯನ್ನು ಕೊಟ್ಟಿದ್ದಾರೆ. ಅದರೊಳಗೆ Cost of land development includes such cost of survey, supervision, establishment charges and any other amount as may be determined by the authority ಎಂದು ಇದೆ. ಮತ್ತು ಶ್ರೀಮಾನ್ ರಾಮಸ್ವಾಮಿಯವರು ಹೇಳತಕ್ಕಂತಹ ಮಾತಿನಲ್ಲಿ ಸ್ವಲ್ಪ

ಅರ್ಥ ಇದೆ. ಅದನ್ನು ತಿದ್ದುಪಡಿ ಮಾಡಬೇಕು ಎಂದರೆ ಯಾವ ರೀತಿ ಮಾಡಬೇಕು ಎಂದು ಅವರ ಸಲಹೆಯನ್ನು ಕೇಳುತ್ತೇನೆ. ಏನು ಸೇರಿಸಬೇಕು ? ಏನು ಬಿಡಬೇಕು ? ಇಂತಹ ಸಂದರ್ಭದಲ್ಲಿ ಯಾವ ಯಾವ ಭಾರವನ್ನು ಹಾಕುವುದು ಸೂಕ್ತ? ಯಾವುದನ್ನು ಹಾಕಬಾರದು ಎನ್ನುವ ಬಗ್ಗೆ ಸ್ಪಷ್ಟವಾದ ಸೂಚನೆಯನ್ನು ಕೊಟ್ಟರೆ ನಮಗೆ ಆಲೋಚನೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ — ಮಾನ್ಯ ಸಭಾಪತಿಗಳೆ. ನಾನು ಈಗಾಗಲೇ ಹೇಳಿದ್ದೇನೆ. ಪ್ರಾಧಿಕಾರಿ ನೌಕರರಿಗೆ ಖರ್ಚು ಮಾಡತಕ್ಕಂತಹದ್ದನ್ನು ರೈತನ ಮೇಲೆ ಹಾಕಬಾರದು. ಭೂಮಿಯ ಅಭಿವೃದ್ಧಿಗಾಗಿ ಪ್ರಾಧಿಕಾರ ಏನು ಖರ್ಚು ಮಾಡುತ್ತದೆ ಅದನ್ನು ಮಾತ್ರ ಅವನ ಮೇಲೆ ಹಾಕುವುದರಲ್ಲಿ ಅರ್ಥವಿದೆ. ಆದರೆ ಇದರಲ್ಲಿ ಕೊಟ್ಟಿರತಕ್ಕ ವಿವರಣೆ ಈ ರೀತಿ ಇದೆ. Survey, Supervision estab ishment charges and any other amount as may be determined by the authority. ಎಂದು ಇದೆ. ಇದನ್ನು ಪೂರ್ತಿ ತೆಗೆದುಹಾಕಬೇಕು. ಮತ್ತೆ ಈ ಅಸಲು ವಿಧಿಯಲ್ಲಿ ಏನಿದೆ ಎಂದರೆ ಭೂಮಿಗೆ ಅಭಿವೃದ್ಧಿ ಮಾಡುವುದಕ್ಕೆ ಎಷ್ಟು ತಗಲುತ್ತದೆ ಅಷ್ಟನ್ನು ಮಾತ್ರ ಆತನ ತಲೆಯ ಮೇಲೆ ಹಾಕಬೇಕು ಎನ್ನುವ ಅಂಶವನ್ನು ಸೇರಿಸಬೇಕು. ಪ್ರಾಧಿಕಾರ ಕಾರ್ಪೊರೇಷನ್ ಹಾಗೂ ಇತ್ಯಾದಿಗಳು ಬಂದರೆ ಒಂದಕ್ಕೆ ಹತ್ತರಷ್ಟು ಖರ್ಚಾಗುತ್ತದೆ. ವ್ಯವಸಾಯ ಕ್ಷೇತ್ರದಲ್ಲಿ: ಕೈಗಾರಿಕಾ ಕ್ಷೇತ್ರದಲ್ಲಿ ಯಾವುದಾದರೂ ಒಂದು ಕಾರ್ಪೊರೇಷನ್ ರಚನೆಯಾದರೆ, ಇಲಾಖೆಯವರು ಏನು ಖರ್ಚು ಮಾಡುತ್ತಾರೆ ಅದಕ್ಕೆ ನಾಲ್ಕರಷ್ಟು ಖರ್ಚಾಗುತ್ತದೆ. ಸದಸ್ಯರು ಮೀಟಿಂಗ್‌ಗೆ ಹಾಜರಾಗುವುದಕ್ಕೆ ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ. ಪ್ರಾಧಿಕಾರದಲ್ಲಿರತಕ್ಕಂತಹ ಎಲ್ಲಾ ಖರ್ಚನ್ನು ರೈತನ ಮೇಲೆ ಹಾಕುವುದು ಸೂಕ್ತವಲ್ಲ, ಕಾರಣ ಏನೆಂದರೆ ವ್ಯವಸಾಯ ಇಲಾಖೆಯಿಂದ ಮಾಡಿಸಿದರೆ ರೈತನ ಮೇಲೆ ಒಂದು ಪೈಸೆಯೂ ಕೂಡ ಖರ್ಚಾಗುತ್ತಿರಲಿಲ್ಲ. ಈಗಾಗಲೇ ಅನೇಕ ಕಡೆಗಳಲ್ಲಿ ವ್ಯವಸಾಯಗಾರರಿಗೆ ಭೂ ಅಭಿವೃದ್ಧಿ ಬ್ಯಾಂಕ್ ಮುಖಾಂತರ ಕಡಿಮೆ ಬಡ್ಡಿ ದರದಲ್ಲಿ ಜಮೀನು ಅಭಿವೃದ್ಧಿ ಮಾಡುವುದಕ್ಕೆ ಅವಕಾಶ ಕೊಟ್ಟಿದೆ. ಆದುದರಿಂದ ನಾವು ಈ ಒಂದು ಪ್ರಾಧಿಕಾರವನ್ನು ರಚಿಸಿ ಒಂದಕ್ಕೆ ನಾಲ್ಕರಷ್ಟು ರೈತನ ತಲೆಮೇಲೆ ಬರುವಂತೆ ಮಾಡತಕ್ಕದ್ದು ಸರಿಯೇ ಎನ್ನುವುದನ್ನು ಯೋಚನೆ ಮಾಡಬೇಕು. ಈ ಒಂದು ಅಂಶ ಬಹಳ ಮುಖ್ಯವಾದುದು. ಇದು ರೈತನಿಗೆ ನೇರವಾಗಿ ಸಂಬಂಧಪಡತಕ್ಕದ್ದು. ಈ ಅಧಿನಿಯಮದ ಅರ್ಥ ಪೂರ್ತಿಯಾಗಿ ಆಗಿಲ್ಲ, ಅದು ಆಚರಣೆಗೆ ಬಂದಮೇಲೆ ಅದರ ನೋವು ಕಾಣುತ್ತದೆ. ರೈತ ಇರಲಿ, ನನಗೆ ತಿಳಿದಹಾಗೆ ಶಾಸನಸಭಾ ಸದಸ್ಯರೇ ಎಷ್ಟೋ ಜನ ಓಡಿಯೋ ಇರುವುದಿಲ್ಲ. ಆಚರಣೆಗೆ ಬಂದಾಗ ಅದರ ಕಷ್ಟ ಕಾಣುತ್ತದೆ. ಒಂದು ಎಕರೆ ಭೂಮಿಗೆ ೪ ಸಾವಿರ ರೂಪಾಯಿ ಆಗಿದೆ ಎಂದು ನೋಟೀಸ್ ಹೋದಾಗ ಅವನು ಪ್ರಾಣವನ್ನು ಕಳೆದು ಕೊಳ್ಳುತ್ತಾನೆ. ಆಗ ನಾವು ಇದನ್ನು ಬದಲಾವಣೆ ಮಾಡುವಂಥ ಪರಿಸ್ಥಿತಿ ಬರುತ್ತದೆ. ಆದುದರಿಂದ ಈಗಲೇ ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ ಭೂಮಿ ಅಭಿವೃದ್ಧಿಗೆ ಎಷ್ಟು ಖರ್ಚಾಗುತ್ತದೋ ಅಷ್ಟನ್ನು ಮಾತ್ರ ರೈತನ ಮೇಲೆ ಹೊರಿಸಿ, ಪ್ರಾಧಿಕಾರದ ಆಡಳಿತಕ್ಕೆ ಎಷ್ಟು ಖರ್ಚಾಗುತ್ತದೋ ಅಷ್ಟನ್ನು ಸರ್ಕಾರ ವಹಿಸಿಕೊಳ್ಳಬೇಕಾದ್ದು ಅಗತ್ಯವಾಗಿದೆ. ಇದನ್ನು ಮಾಡಿದರೆ ಪ್ರಾಧಿಕಾರ ಮಾಡಿದ್ದಕ್ಕೆ ಅರ್ಥ ಬರುತ್ತದೆ. ಸಮಸ್ತ ಖರ್ಚನ್ನೂ ರೈತ ವಹಿಸಿಕೊಳ್ಳುವುದಾದರೆ ಸರ್ಕಾರ ಮಾಡಿದ್ದೇನು? ಆ ಜನಗಳೇ ಮಾಡಿದ್ದು, ಆ ಜನಗಳದ್ದೇ ಆದಾಯ ಆ ಜನಗಳದ್ದೇ ಖರ್ಚು. ಅದು ಹೀಗೆ ಬರುತ್ತದೆ. ಇದರ ಬಗ್ಗೆ ತೀವ್ರವಾಗಿ ಯೋಚನೆ ಮಾಡಿ ಅದನ್ನು ಬದಲಾವಣೆ ಮಾಡಬೇಕು ಎಂದು ನಾನು ಅರಿಕೆ ಮಾಡುತ್ತೇನೆ.

ಈ ಅಧಿನಿಯಮದ ಮತ್ತೊಂದು ಅಂಶದ ಬಗ್ಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದೇನೆಂದರೆ, ನಿಮ್ಮ ಸಾಲ ಕೊಡತಕ್ಕ ಸಂಸ್ಥೆಗಳ ಒಂದು ಪರಿಷ್ಕರಣ, ಒಂದು ಕ್ರೋಢೀಕರಣ. ಗ್ರಾಮಾಂತರ ಪ್ರದೇಶಗಳಲ್ಲಿ ಏನಾಗಿದೆಯೆಂದರೆ, ಬ್ಯಾಂಕುಗಳು ಪೈಪೋಟಿಯಲ್ಲಿವೆ. ಈವತ್ತಿನ ದಿವಸ ಪ್ರತಿಯೊಂದು ಹಳ್ಳಿಯಲ್ಲೂ ಬ್ಯಾಂಕುಗಳು ಆಗುತ್ತಾ ಇವೆ, ಸಹಕಾರಿ ಸಂಘಗಳೂ ಇವೆ. ಆದರೆ ಇಷ್ಟೆಲ್ಲಾ ಇದ್ದರೂ ಕೂಡ ಸಾಲ ಬೇಕು ಎಂದು ಕೇಳತಕ್ಕ ರೈತನು ೧೦ ಆಫೀಸುಗಳಿಗಾದರೂ ತಿರುಗಾಡಬೇಕಾಗಿದೆ, ತಹಶೀಲ್ದಾರ್ ಆಫೀಸು, ಸಬ್ ರಿಜಿಸ್ಟ್ರಾರ್ ಆಫೀಸ್, ಅಸಿಸ್ಟೆಂಟ್ ಕಮಿಷನರ್ ಆಫೀಸು, ಡೆಪ್ಯುಟಿ ಕಮಿಷನರ್ ಆಫೀಸು, ಬ್ಯಾಂಕುಗಳು ಹೀಗೆ ಹಲವಾರು ಸಂಸ್ಥೆಗಳಿಗೆ ಹೋಗ ಬೇಕಾಗುತ್ತದೆ, ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ತಯಾರು ಮಾಡುವುದಕ್ಕೆ ನೂರಾರು ರೂಪಾಯಿಗಳನ್ನು ಖರ್ಚುಮಾಡಿ ಕಾಲವನ್ನು ವ್ಯರ್ಥಮಾಡಿ ತಿರುಗಾಡತಕ್ಕಂಥ ಒಂದು ಪರಿಸ್ಥಿತಿ ಇದೆ. ಆದುದರಿಂದ ಸಾಲ ಕೊಡತಕ್ಕ ಸಂಸ್ಥೆಗಳು ಏನಿವೆ ಇವು ಒಂದು ಗ್ರಾಮಕ್ಕೆ ಒಂದೇ ಒಂದು ಸಂಸ್ಥೆ ಇರ

ಬೇಕು. ಆ ಸಂಸ್ಥೆ ರೈತನ ಮನೆಗೆ ಹೋಗಿ ಅವನ ರಿಕಾರ್ಡ್‌ಗಳನ್ನು ತಯಾರುಮಾಡಿ ಸಾಲವನ್ನು ಒದಗಿಸತಕ್ಕ ವ್ಯವಸ್ಥೆ ಆಗಬೇಕು, ಆಗದೇ ಹೋದರೆ ಬಡ ರೈತ ಹಿಂದೆ ಉಳಿಯುತ್ತಾನೆ. ಶ್ರೀಮಂತ ರೈತ ಮಾತ್ರ ಸಾಲವನ್ನು ತೆಗೆದುಕೊಂಡು ಜಮೀನನ್ನು ಅಭಿವೃದ್ಧಿ ಮಾಡುತ್ತಾನೆ. ಮಧ್ಯಮ ವರ್ಗದ ರೈತ ಮತ್ತು ಸಣ್ಣ ರೈತರಿಗೆ ಯಾವ ಸಂಸ್ಥೆಗಳಿಂದಲೂ ಸಾಲ ದೊರಕುವುದಿಲ್ಲ. ಬ್ಯಾಂಕುಗಳು ಸಾಲ ವನ್ನು ಕೊಡುವಾಗ ಅವನ ಶಕ್ತಿಯನ್ನು ನೋಡುತ್ತವೆ. ಇದನ್ನು ನೋಡಬೇಕು. ಮತ್ತೆ ಬಹಳ ಮುಖ್ಯವಾದ ಅಂಶವೆಂದರೆ, ಪ್ರಾಧಿಕಾರಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಪ್ರಾಧಿಕಾರ ಕ್ರೆಡಿಟ್ ಏಜೆನ್ಸಿಯಿಂದ ಸಾಲ ತೆಗೆದುಕೊಳ್ಳುತ್ತದೆ. ಬ್ಯಾಂಕ್‌ನವರು ಶೇಕಡ ೧೪ ರಿಂದ ೧೬ರವರೆಗೆ ಬಡ್ಡಿ ಹಾಕು ತ್ತಾರೆ. ಪ್ರಾಧಿಕಾರ ಅದಕ್ಕೆ ಶೇಕಡ ಒಂದು, ಒಂದೂವರೆಯಷ್ಟು ಬಡ್ಡಿ ಸೇರಿಸಿ ರೈತರಿಗೆ ಸಾಲ ಕೊಡು ತ್ತಾರೆ. ಇದರಿಂದ ಸಾಲ ತೆಗೆದುಕೊಂಡು ಜಮೀನು ಅಭಿವೃದ್ಧಿಯಾಗಬೇಕಾದರೆ ಶೇಕಡ ೧೫, ೧೬ ಪರ್ಸೆಂಟ್ ಬಡ್ಡಿ ಬೀಳುತ್ತದೆ. ಹೀಗೆ ೧೫, ೧೬ ಪರ್ಸೆಂಟ್ ಬಡ್ಡಿಗೆ ಹಣವನ್ನು ತೆಗೆದುಕೊಂಡು ಅದ್ಯಾವ ರೈತ ಜಮೀನಿನಲ್ಲಿ ಸಂಪಾದನೆಮಾಡಿ ಸಾಲವನ್ನು ತೀರಿಸುವುದಕ್ಕೆ ಸಾಧ್ಯ. ಸಣ್ಣ ರೈತ ಈ ರೀತಿ ಮಾಡುವುದಕ್ಕೆ ಆಗುವುದಿಲ್ಲ. ೨ ಎಕರೆ, ೩ ಎಕರೆ ಜಮೀನು ಇರತಕ್ಕ ರೈತ ಸಾಲವನ್ನು ತೀರಿಸುವುದಕ್ಕೆ ಆಗದೆ, ಬಡ್ಡಿ ಕೊಡುವುದಕ್ಕಾಗದೆ ಜಮೀನನ್ನು ಪ್ರಾಧಿಕಾರಕ್ಕೆ ವಹಿಸಿ ಇನ್ಯಾರದೋ ಜಮೀನಿನಲ್ಲಿ ಕೂಲಿ ಕೆಲಸ ಮಾಡತಕ್ಕ ಪರಿಸ್ಥಿತಿ ಬರುತ್ತದೆ. ಆದುದರಿಂದ ಇವರ ಬಗ್ಗೆ ತಾವು ಸೂಕ್ಷ್ಮವಾಗಿ ಯೋಚನೆಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಇದರಲ್ಲಿ ನಾವು ಆತುರ ಮಾಡಿದವೇನೋ ಎಂದು ನನಗನ್ನಿಸುತ್ತದೆ. ಅವಶ್ಯಕತೆ ಇದ್ದರೂ ಸ್ವಲ್ಪ ಯೋಚನೆಮಾಡಿ ಇದರಲ್ಲಿ ವಾಸ್ತವಿಕವಾಗಿ ಕಾರ್ಯ ಮಾಡುವ ಕಾಲದಲ್ಲಿ ಏನೇನು ತೊಂದರೆಗಳು, ತೊಡಕುಗಳ ಬರಬಹುದು ಎನ್ನುವುದನ್ನು ಯೋಚನೆ ಮಾಡಿ ಮಾಡಬೇಕಾಗಿತ್ತು. ಸರ್ಕಾರದ ಉದ್ದೇಶ ಒಳ್ಳೆಯದು, ಬೇಗ ಮಾಡಬೇಕು, ಅಭಿವೃದ್ಧಿ ಮಾಡಬೇಕು ಎನ್ನುವ ಸರ್ಕಾರದ ಆಸಕ್ತಿಯನ್ನು ತೋರಿಸುತ್ತದೆ. ಈ ರೀತಿಯಾಗಿ ಹಲವಾರು ತೊಡಕು ತೊಂದರೆಗಳು ರೈತರಿಗೆ ಮುಂದೆ ಬರಬಹುದಾದಂಥ ಅನಾಹುತಗಳು ಇದರಲ್ಲಿ ಅಡಕವಾಗಿವೆ. ಆದುದ ರಿಂದ ಸರ್ಕಾರ ಇದರ ಬಗ್ಗೆ ಯೋಚನೆಮಾಡಿ ಇದನ್ನು ಆಚರಣೆಗೆ ತರುವಾಗ ತೊಡಕುಗಳು ಇಲ್ಲದಂತ ತರುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಈ ಸಮಯದಲ್ಲಿ ಅರಿಕೆ ಮಾಡುತ್ತೇನೆ ನಮ್ಮ ಭೂಮಿ ಅಭಿವೃದ್ಧಿಯ ಒಂದು ಕ್ಷೇತ್ರದಲ್ಲಿ ಅನೇಕ ಯೋಜನೆಗಳಿವೆ. ದುರದೃಷ್ಟವಶಾತ್, ಈ ದೇಶದಲ್ಲಿ ಹೊಸ ಯೋಜನೆ ಪ್ರಾರಂಭವಾಗಬೇಕಾದರೆ ಮೊದಲು ನೌಕರವರ್ಗದ ನೇಮಕ, ಅವರ ಸಂಬಳ ಸಾರಿಗೆ ಗಳು—ಇವಕ್ಕೆ ಪ್ರಾಮುಖ್ಯತೆ ಸಿಗುತ್ತದೆಯೇ ವಿನಹ ಭೂಮಿ ಅಭಿವೃದ್ಧಿಯಾಗಬೇಕು ಎನ್ನುವ ವಿಷಯ ಎರಡನೇ ಸ್ಥಾನ ಪಡೆಯುತ್ತದೆ. ಹೊಸ ಆಫೀಸು ಆಗಬೇಕಾದರೆ, ದೊಡ್ಡ ಆಫೀಸರು, ಇಬ್ಬರು ಸೀನಿಯರ್ ಟೈಪಿಸ್ಟ್, ಇಬ್ಬರು ಜೂನಿಯರ್ ಟೈಪಿಸ್ಟ್, ನಾಲ್ಕು ಜನ ಜವಾನರು ಇದಲ್ಲಾ ಆಗಬೇಕು. ವಾಸ್ತವವಾಗಿ ಏನು ಬೆಳೆಯಬೇಕು. ಎಷ್ಟು ಉತ್ಪಾದನೆಯಾಗಬೇಕು ಎನ್ನುವುದರ ಕಡೆ ಮೊದಲು ಗಮನಕೊಡಬೇಕು. ಮೊದಲನೆಯದಾಗಿ, ಯೋಜನಾಕ್ರಮದಲ್ಲಿರತಕ್ಕ ದೋಷ, ಇದೇ ವಾಸ್ತವಿಕ ಟಾರ್ಗೆಟ್ ಏನಿದೆ, ಅದನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಇದರ ಪರಿಣಾಮವಾಗಿ ನಮ್ಮ ದೇಶದ ಆದಾಯದಲ್ಲಿ ಅರ್ಧಕ್ಕಿಂತ ಹೆಚ್ಚಾಗಿ ನೌಕರ ವರ್ಗಕ್ಕೆ ಸಂಬಳಗಳನ್ನು ಕೊಡುತ್ತಿದ್ದೇವೆ. ಇದು ವೈಜ್ಞಾನಿಕವಾದ ಕೆಲಸ ಅಲ್ಲ ಎಂದು ನಾನು ಅರಿಕೆ ಮಾಡುತ್ತೇನೆ. ಇದನು ಆಚರಣೆಗೆ ತರಬೇಕಾದರೆ ವಿಕೇಂದ್ರೀಕರಣವನ್ನು ನಾವು ಅನುಸರಿಸಬೇಕು ಇದರಲ್ಲಿ ನೇಮಕವಾಗತಕ್ಕ ಅಧಿಕಾರಿಗಳೆಲ್ಲಾ ಆಯಾಯ ಕಮ್ಯಾಂಡ್ ಏರಿಯಾದಲ್ಲಿರತಕ್ಕ, ಸ್ಥಳಗಳಲ್ಲಿರತಕ್ಕವರೇ ಇದರಲ್ಲಿ ಕೆಲಸ ಮಾಡುವವರು ಇರಬೇಕು. ಅವರಿಗೆ ಕಷ್ಟಸುಖ ಗೊತ್ತಾಗಿರಬೇಕು. ಬೆಂಗಳೂರು ಪೇಟೆಯಲ್ಲಿರತಕ್ಕವ ರನ್ನು ಕರೆದುಕೊಂಡು ಹೋದರೆ ಅವರು ಎರಡು ದಿವಸ ರಜಾ ಹಾಕಿ ಬೆಂಗಳೂರಿನಲ್ಲಿ ಇರುತ್ತಾರೆ. ಆಯಾ ಪ್ರದೇಶದ ರೈತರ ಮಕ್ಕಳನ್ನು ಅಲ್ಲಿಯೇ ನೇಮಿಸತಕ್ಕ ಕೆಲಸಗಳನ್ನು ನಾವು ಮಾಡಬೇಕು, ಉದಾಹರಣೆಗಾಗಿ ಕೆಲವು ಅಂಶಗಳನ್ನು ಮಾತ್ರ ತಿಳಿಸಿದ್ದೇನೆ. ಮುಂದೆ ಬರತಕ್ಕ ದೋಷಗಳನ್ನು ಗಮನ ದಲ್ಲಿಟ್ಟುಕೊಂಡು ಇದನ್ನು ಆಚರಣೆಗೆ ತರಬೇಕು ಎಂದು ಹೇಳಿ, ಈ ಮಸೂದೆಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

†ಶ್ರೀ ಬಿ. ಎನ್. ಕೆಂಗೇಗೌಡ (ಚಾಮರಾಜ). — ಮಾನ್ಯ ಅಧ್ಯಕ್ಷರೇ, ಈ ಕರ್ನಾಟಕ ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಬಿಲ್ ಏನಿದೆ ಇದು ನಿಜವಾಗಲೂ ಒಳ್ಳೆಯ ಮಸೂದೆ ಎಂದು ನಾನು ತಿಳಿಸು ವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಮಾತನಾಡಿದಂಥ ಸದಸ್ಯರು ಇದು ಯಾವ ರೀತಿಯಿಂದ

ಒಳ್ಳೆಯದು, ನ್ಯೂನತೆಗಳು ಯಾವುದು ಇದೆ ಎನ್ನುವ ವಿಷಯದ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ನಾನಾದರೂ ಕೂಡ ಕೇವಲ ಒಂದೆರಡು ಪಾಯಿಂಟ್ಸ್ ಮೇಲೆ ಹೇಳುವವನಿದ್ದೇನೆ, ಒಂದನೆಯದು, In definition clause-Sec. 9 it says like this; "ineligible person" i.e. minors without guardians" ಎಂದು ಹೇಳಿದೆ. ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಕ್ಷೇತ್ರದಲ್ಲಿ ಮೈನರುಗಳಿಗೆ ಏನಾದರೂ ಜಮೀನಿದ್ದ ಪಕ್ಷದಲ್ಲಿ ಅವರ ಜಮೀನನ್ನು ಕೂಡ ಈ ಒಂದು ಅಥಾರಿಟಿಗೆ ಒಳಪಡಿಸಿಕೊಂಡು ಅವರ ಜಮೀನನ್ನು ಅಭಿವೃದ್ಧಿ ಮಾಡಬೇಕು ಎಂದು ಮಾಡಿದ್ದೀರಿ. ಇದನ್ನು ಮಾಡಿದರೆ physical target ಗೆ ನಾವು ಗಮನ ಕೊಡುವುದಿಲ್ಲ.

ಮೈನರ್ ಬಗ್ಗೆ ನೀವು ಏನಾದರೂ ಖರ್ಚು ಮಾಡಿದ್ದೇ ಆದರೆ ಅವರಿಂದ ವಸೂಲಾತಿ ಮಾಡತಕ್ಕಂಥದ್ದು ಸ್ವಲ್ಪ ಕಾನೂನಿನ ತರಹ ಮಾಡುವುದಾದರೆ ಅದು ಕಾನೂನಿಗೆ ವಿರುದ್ಧವಾಗಿದೆ. ತಾವು ತಂದಿರತಕ್ಕಂಥ ಆ್ಯಕ್ಟಿನ ಪೇಜ್ ೨೯ ರಲ್ಲಿ "Therefore, it has been found necessary to make CADAs statutory bodies, and to empower them to enforce land development on compulsory basis as also to borrow and lend money for land development and other purposes." ಎಂದು ಹೇಳಿದ್ದೀರಿ. ಮೈನರ್ಸ್ ಜಮೀನು ಏನಿದೆ ಅದನ್ನು ಅವರಿಂದ ಹೆಚ್ಚಿಗೆ ಇದ್ದಂಥ ಜಮೀನು ತೆಗೆದುಕೊಂಡು ಡೆವಲಪ್‌ಮೆಂಟ್‌ಗೆ ಖರ್ಚು ಮಾಡಿದ್ದೇ ಆದರೆ ವಸೂಲಾತಿಗೆ ಕಷ್ಟವಾಗುತ್ತದೆ. ಅದಕ್ಕೆ ಸರ್ಕಾರದವರು ಸೂಕ್ತವಾದ ಪರಿಹಾರವನ್ನು ಕಂಡುಹಿಡಿಯಬೇಕೆಂದು ನನ್ನ ಸಲಹೆ. ಮತ್ತೆ ಶ್ರೀಮಾನ್ ಹಾರನ ಹಳ್ಳಿ ರಾಮಸ್ವಾಮಿಯವರು ಮಾತನಾಡುತ್ತಾ ಎರಡು ಎಕರೆ ಜಮೀನು ರೈತನಿಗೆ ಇರುತ್ತದೆ ಅದನ್ನು ಅಭಿವೃದ್ಧಿ ಮಾಡುವುದಕ್ಕೆ ಎಷ್ಟು ಖರ್ಚು ಆಗುತ್ತದೆಂದರೆ ಸರಾಸರಿ ಒಂದು ಎಕರೆಗೆ ೪ ಸಾವಿರ ರೂಪಾಯಿ ಖರ್ಚು ಬರುತ್ತದೆ ಎರಡು ಎಕರೆಯೆಂದರೆ ೮ ಸಾವಿರ ರೂಪಾಯಿಗಳು ಖರ್ಚಿಗೆ ಬರುತ್ತದೆ. ಅವನಿಗೆ ಅಷ್ಟು ಹಣವನ್ನು ವಾಪಸ್ಸು ಕೊಡುವುದಕ್ಕೆ ಆಗುವುದಿಲ್ಲ. ಅವನು ವಾಪಸ್ಸು ಕೊಡದೇ ಇರುವಂಥ ಪರಿಸ್ಥಿತಿ ಬಂದಾಗ ಅಥಾರಿಟಿಯವರು ಅದನ್ನು ವಹಿಸಿಕೊಂಡು ಬೇರೆಯವರಿಗೆ ಮಾರಾಟ ಮಾಡಿದ್ದರೆ ಅವನು ಆಗ ಇನ್ನೊಬ್ಬರಿಗೆ ಆಶ್ರಯದಲ್ಲಿ ಕೂಲಿ ಮಾಡಿ ಜೀವನ ಮಾಡಬೇಕಾದ ಸಂದರ್ಭ ಉಂಟಾಗುತ್ತದೆ ಅದು ಆಗಬಾರದೆಂದು ಹೇಳಿದ್ದಾರೆ. ಅದಕ್ಕೆ ನನ್ನ ಒಂದು ಸಲಹೆಯನ್ನು ಈ ಸಂದರ್ಭದಲ್ಲಿ ಸರ್ಕಾರದವರಿಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಆ ರೀತಿ ಏನಾದರೂ ಹೆಚ್ಚಿನ ಖರ್ಚು ಬಂದಾಗ ಅಥಾರಿಟಿಯವರ ಮುಂಖಾಂತರ ಕೊಡುವ ಪರಿಸ್ಥಿತಿ ಉಂಟಾಗಿದ್ದೇ ಆದರೆ ಅದನ್ನು ಸಾಕಷ್ಟು ಇನ್‌ಸ್ಟಾಲ್‌ಮೆಂಟ್‌ಗಳ ಮೇಲೆ ತೀರಿಸುವುದಕ್ಕೆ ಅವಕಾಶ ಮಾಡಿಕೊಟ್ಟರೆ ಆಗ ಅವರ ಜಮೀನು ಅವರಿಗೇ ಉಳಿಯುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಅವರಿಗೆ ಅಂಥಾ ಸಂದರ್ಭದಲ್ಲಿ ಇನ್ನು ಹೆಚ್ಚಿನ ಇನ್‌ಸ್ಟಾಲ್‌ಮೆಂಟ್‌ಗಳನ್ನು ಕೊಟ್ಟು ಅವರ ಒಂದು ಜೀವನೋಪಾಯವನ್ನು ತನ್ನ ಜಮೀನಿನಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಏರ್ಪಾಡನ್ನು ಸರ್ಕಾರ ಮಾಡಬೇಕೆಂದು ಸಲಹೆ ಮಾಡಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ವಿ. ಎ. ಮಂತ್ರಿಕಟ್ಟಿ (ರೋಣ).— ಸನ್ಮಾನ್ಯ ಸಭಾಪತಿಗಳೇ, ಕರ್ನಾಟಕ ಸರ್ಕಾರ ತಂದಿರುವ ಕರ್ನಾಟಕ ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಬಿಲ್ಲನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈ ಬಿಲ್ಲು ನೀರಾವರಿ ಯೋಜನೆಯ ಕಕ್ಷೆಯಲ್ಲಿ, ಅದರ ವ್ಯಾಪ್ತಿಯಲ್ಲಿ ಬರುವುದಲ್ಲದೇ ಸರ್ವತೋಮುಖಾಭಿವೃದ್ಧಿಗೆ ದಾರಿಯನ್ನು ಮಾಡಿಕೊಡುತ್ತೇವೆಂಬುದನ್ನು ನಾನು ನಂಬಿದ್ದೇನೆ. ಇದು ಮುಂದುವರಿದ ರಾಷ್ಟ್ರಗಳಲ್ಲಿ, ಸಮಾಜವಾದಿ ರಾಷ್ಟ್ರಗಳಲ್ಲಿರತಕ್ಕಂಥದ್ದನ್ನು ನಮ್ಮ ರಾಜ್ಯದಲ್ಲಿಯೂ ಮಾಡಲು ತಂದಿರತಕ್ಕಂಥದ್ದು ನಿಜವಾಗಿಯೂ ಸ್ತುತ್ಯಾರ್ಹವಾದ ಕೆಲಸ. ಇದರಿಂದ ನೇರವಾದ ಮತ್ತು ಸಮಯೋಚಿತವಾದ ವ್ಯವಸ್ಥೆಯಲ್ಲಿ ಎಲ್ಲರಿಗೂ ಒಂದು ಬಲ ಸಿಕ್ಕಿದ ಹಾಗಾಯಿತೆಂದರೆ ತಪ್ಪಾಗಲಾರದು. ಹೆಚ್ಚಾಗಿ ಅದರಲ್ಲೂ ನಮ್ಮ ಕರ್ನಾಟಕದಲ್ಲಿ ಕೃಷಿ ಅಭಿವೃದ್ಧಿಯಾದಾಗ ಮಾತ್ರ ಈ ರಾಜ್ಯದ ಆರ್ಥಿಕ ಅಭಿವೃದ್ಧಿಯಾಗುತ್ತದೆಂದು ಹೇಳಿದರೆ ತಪ್ಪಾಗಲಾರದು. ಇಂಥಾ ಒಂದು 'ಕಾಡಾ' ವನ್ನು ಇಟ್ಟುಕೊಂಡಿರುವುದರಿಂದಲೇ ಸಮಾಜವಾದಿ ರಾಷ್ಟ್ರಗಳು ಬಹು ತೀವ್ರವಾಗಿ ಅಭಿವೃದ್ಧಿಯನ್ನು ಹೊಂದುವುದಕ್ಕೆ ಕಾರಣವಾಗಿದೆಂಬುದು ತಿಳಿಯುತ್ತದೆ. ಇಂಥಾ ಒಂದು ಬಿಲ್ಲನ್ನು ನಮ್ಮ ದೇಶದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ತಂದಿರುವುದಕ್ಕಾಗಿ ನಾನು ಅತ್ಯಂತ ಹೃತ್ಪೂರ್ವಕವಾಗಿ ವಂದಿಸುತ್ತಿದ್ದೇನೆ. ಇದರಲ್ಲಿರತಕ್ಕ ಉದ್ದೇಶಗಳನ್ನು ಮತ್ತು ಕೆಲವು ರೈತರಿಗೆ ತೊಂದರೆಯಾಗುತ್ತದೆಂದು ನನ್ನ ಹಿರಿಯ ಸದಸ್ಯರುಗಳು ಹೇಳಿದರು

ಆದರೆ ಅದನ್ನು ನಾನು ಅದನ್ನು ಅಲ್ಲಗಳೆಯಲು ಇಷ್ಟಪಡುವುದಿಲ್ಲ. ಇವತ್ತು ದೊಡ್ಡ ಜಮೀನ್ದಾರರು ಏನಿದ್ದಾರೆ ಅವರು ತನ್ನ ಆರ್ಥಿಕ ಮಟ್ಟಕ್ಕೆ ಅನುಕೂಲವಾಗಿ ಬ್ಯಾಂಕ್‌ಗಳ ಮೂಲಕ ಅಥವಾ ತನ್ನ ಪ್ರಭಾವವನ್ನು ಬೇರೆ ಯಾವುದಾದರೊಂದು ರೂಪದಲ್ಲಿ ಹಣವನ್ನು ಪಡೆದು ವೈಜ್ಞಾನಿಕ ರೀತಿಯಲ್ಲಿ ಒಕ್ಕಲುತನ ಮಾಡಿ ತನ್ನ ಭೂಮಿಯನ್ನು ಅಭಿವೃದ್ಧಿ ಪಡಿಸಿಕೊಂಡು ಹೆಚ್ಚಿನ ಬೆಳೆಯನ್ನು ಬೆಳೆಯುವುದಕ್ಕೆ ಶಕ್ತಿ ಇರುತ್ತದೆ. ಆದರೆ ೧೦೦ಕ್ಕೆ ೮೦ ರಷ್ಟೇ ಬಡವರು ಆಗಿರುವ ಸಾಮಾನ್ಯ ರೈತರು ಯಾರಿದ್ದಾರೆ ಅವರು ತಮ್ಮ ಜಮೀನನ್ನು ಸಮಪಾತಳಿ, ಮಾಡಿ ವ್ಯವಸ್ಥಿತವಾಗಿ ಮಡ್ಡುಗಳನ್ನು ಹಾಕಿಕೊಂಡು, ಅಭಿವೃದ್ಧಿ ಹೊಂದಲು ಅವರಿಗೆ ಅರ್ಥಿಕ ಬೆಂಬಲವಿರುವುದಿಲ್ಲ. ಇದರಿಂದ ಎಷ್ಟೋ ಜನ ರೈತರಿಗೆ ಉತ್ಪನ್ನ ಕಡಿಮೆಯಾಗಿ ಕಷ್ಟದಲ್ಲಿರುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ನಾನು ಮಲಪ್ರಭಾ ನೀರಾವರಿ ಯೋಜನೆಯ ಕಕ್ಷೆಯಲ್ಲಿ ಬರುವವನಾಗಿರುವುದರಿಂದ, ಅಲ್ಲಿರತಕ್ಕ ವ್ಯವಸ್ಥೆಯನ್ನು ನೋಡಿದರೆ ಬಹಳ ದುಃಖಪಟ್ಟಿದ್ದೇನೆ: ಅಲ್ಲಿ ಕ್ಯಾನ್ಸಲ್ ಕಂಪ್ಲೀಟ್ ಆಗಿದೆಂದು ಹೇಳಿದರು, ಆದರೆ ಅಲ್ಲಿ ನೀರು ಹೋಗದೇ ಇರತಕ್ಕಂಥದ್ದನ್ನು ನೋಟಿಫೈ ಮಾಡಿರುವುದನ್ನು ನೋಡಿದ್ದೇನೆ, ವಾಟರ್ ಲೆವಿ ಹಾಕಿದ್ದನ್ನೂ ನೋಡಿದ್ದೇನೆ ಇಂಥಾ ತೊಂದರೆಗಳನ್ನು ಹೋಗಲಾಡಿಸಲು ವ್ಯವಸ್ಥಿತವಾದ ಒಂದು ಅಥಾರಿಟಿ ಇದ್ದರೆ ಅವರ ಮುಂದೆ ಇವುಗಳನ್ನೆಲ್ಲಾ ಪ್ರತಿಪಾದನೆ ಮಾಡಿ ಅದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಅನುಕೂಲವಾಗುತ್ತೆಂದು ನಂಬಿದ್ದೇನೆ. ಈ ಅಥಾರಿಟಿಯ ಉದ್ದೇಶಗಳನ್ನು ಹೇಳುತ್ತಾ ಭೂಮಿಯ ಸಮಪಾತಳಿ, ಬೈಂಡಿಂಗ್ ಮತ್ತು ಭೂಮಿಯ ಸವಲು ಆಗುವುದನ್ನು ತಪ್ಪಿಸುವುದು, ಮತ್ತು ಹಣಕಾಸಿನ ನೆರವಿನ ಬಗ್ಗೆ ಹೇಳುತ್ತಾ, ಅಗ್ರಿಕಲ್ಚರಲ್, ಹಾರ್ಟಿಕಲ್ಚರಲ್, ಅನಿಮಲ್ ಹಸ್ಬೆಂಡ್ರಿ, ಫಿಶರೀಶ್, ಕೋಆಪರೇಟಿವ್ ಇವುಗಳ ಸರ್ವತೋಮುಖ ಅಭಿವೃದ್ಧಿ ಮಾಡುವ ಬಗ್ಗೆ ಹೇಳಿದ್ದಾರೆ ಅದರ ಜೊತೆಗೆ ನನ್ನ ಒಂದು ಸಲಹೆಯನ್ನು ಮಾನ್ಯ ಮಂತ್ರಿಗಳವರು ಕೇಳಿ ಅದನ್ನೂ ಸಹ ಅದರ ಜೊತೆಗೆ ಸೇರಿಸಬೇಕೆಂದು ಹೇಳಬಯಸುತ್ತೇನೆ. ಅದು ಏನೆಂದರೆ ವೇರ್ ಹೌಸಿಂಗ್ ಸ್ಟೋರ್‌ನ ವ್ಯವಸ್ಥೆಯನ್ನು ಕಲ್ಪಿಸಿ ಕೊಡಬೇಕು. ಈ ಒಂದು ಮಾರ್ಕೆಟಿಂಗ್ ಫೆಸಲಿಟಿಸನ್ನು ರೈತರಿಗೆ ಒದಗಿಸಿ ಕೊಟ್ಟು ರೈತನು ತಾನು ಬೆಳೆದಂಥ ಬೆಳೆಗೆ ಮಾರ್ಕೆಟ್‌ನಲ್ಲಿ ಒಂದು ಬೆಲೆ ದೊರೆಯುವಂಥಾ ಸುವ್ಯವಸ್ಥಿತವಾದ ಏರ್ಪಾಡನ್ನು ಮಾಡಲು ಅನುಕೂಲವಾಗುವಂತೆ ಅದನ್ನು ಅದರ ಜೊತೆಗೆ ಸೇರಿಸಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಈ ಅಥಾರಿಟಿಯಲ್ಲಿ ೫ ಜನ ಸದಸ್ಯರನ್ನು ಸರ್ಕಾರದವರು ನಾಮಿನೇಟ್ ಮಾಡುವುದಾಗಿ ತಿಳಿಸಿದ್ದಾರೆ. ಅದರಲ್ಲಿ ಇಬ್ಬರು ಸಣ್ಣ ಹಿಡುವಳಿದಾರರನ್ನು ನೇಮಿಸಬೇಕೆಂದು ಹೇಳಿದ್ದಾರೆ ಆದರೆ ಈ ಸಂಖ್ಯೆ ಅಲ್ಲಿ ಬರತಕ್ಕ ಆಫೀಷಿಯಲ್ಸ್‌ಗಿಂತ ಬಹಳ ಕಡಿಮೆಯಾಗುತ್ತದೆ ನನ್ನ ಹಿರಿಯ ಸದಸ್ಯರಾದ ಶ್ರೀ ಆರ್ಮುಗಂರವರು ಮತ್ತು ಶ್ರೀ ಕಕ್ಕಿಲಾಯರವರು ಹೇಳಿದ ಪ್ರಕಾರ ಪ್ರಜಾಪ್ರತಿನಿಧಿಗಳಾಗಿ ಯಾರು ನಿಜವಾಗಿಯೂ ಇಲ್ಲಿಗೆ ಆರಿಸಿ ಬಂದಿರುವ ಶಾಸಕರು ಇದ್ದಾರೋ ಅವರಿಗೂ ಅಲ್ಲಿ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಇವತ್ತು ಶೇಕಡ ೨೪ ಜನಕ್ಕಿಂತ ಹೆಚ್ಚು ಅಲ್ಲಿ ಹರಿಜನರು ಗಿರಿಜನರೇ ಇರುವುದರಿಂದ ಅದರಲ್ಲಿ ಅವರಿಗೂ ಪ್ರಾತಿನಿಧ್ಯವಿರಬೇಕು, ಇಲ್ಲದಿದ್ದರೆ ಕೃಷಿ ಕಾರ್ಮಿಕರ ಕಷ್ಟ ನಿವಾರಣೆಯಾಗುವುದು ಕಷ್ಟವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದುದರಿಂದ ಅವುರುಗಳ ಪ್ರತಿನಿಧಿಗಳು ಅಲ್ಲಿ ಇಲ್ಲದೇ ಹೋದರೆ ಅವರ ಅಭಿವೃದ್ಧಿಗಾಗಿ ಏನೂ ಮಾಡಿದ ಹಾಗೆ ಆಗುವುದಿಲ್ಲ. ಅದು ಸರ್ವತೋಮುಖವಾದ ಅಭಿವೃದ್ಧಿ ಮಾರ್ಗವಾಗುವುದಿಲ್ಲ ಎಂಬುದನ್ನು ಒತ್ತಿ ಹೇಳುತ್ತೇನೆ. ಆದುದರಿಂದ ನನ್ನ ಹಿರಿಯ ಸದಸ್ಯರು ಹೇಳಿದ ಪ್ರಕಾರ ಪದಾಧಿಕಾರದಲ್ಲಿ ಕನಿಷ್ಟ ಪಕ್ಷ ಇಬ್ಬರು ಕೃಷೀ ಕಾರ್ಮಿಕರ ಪ್ರತಿನಿಧಿಗಳಾಗಿರತಕ್ಕವರು ಹೆಚ್ಚು ಜನ ಇರಲೇ ಬೇಕು ಎಂದು ಹೇಳುವುದಕ್ಕ ಇಷ್ಟಪಡುತ್ತೇನೆ.

೩–೧೦ ಪಿ. ಎಂ.

ನಮ್ಮ ಹಿರಿಯ ಸದಸ್ಯರಾದ ಶ್ರೀ ರಾಮಸ್ವಾಮಿಯವರು ಹೆಚ್ಚು ಜನ ಸದಸ್ಯರನ್ನು ಹಾಕಿ ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿಯನ್ನು ನೇಮಿಸುವುದರಿಂದ, ಅದರ ಹಣಕಾಸಿನ ವ್ಯವಸ್ಥೆಯಿಂದ ಹೆಚ್ಚು ಹೆಚ್ಚಾಗಿ ಜನರಿಗೆ ಉಪಯೋಗವಾಗುವುದಿಲ್ಲ, ಸರ್ಕಾರೀ ಇಲಾಖೆಗಳೇ ಈ ಎಲ್ಲಾ ಕೆಲಸಗಳನ್ನು ಮಾಡುತ್ತವೆ; ಆದ್ದರಿಂದ ಈ ಅಥಾರಿಟಿಯ ಅವಶ್ಯಕತೆ ಇಲ್ಲ ಎಂಬುದಾಗಿ ತಿಳಿಸಿದ್ದಾರೆ. ನಾನು ಅದನ್ನು ಬೆಂಬಲಿಸುವುದಿಲ್ಲ. ಏಕೆಂದರೆ ಸರ್ಕಾರದ ಬೇರೆ ಬೇರೆ ಇಲಾಖೆಗಳು ಬೇರೆ ಬೇರೆ ರೀತಿಯ ಕೆಲಸಗಳನ್ನು ಮಾಡುತ್ತಾ ಇರುವುದರಿಂದ ಕಾಂಪ್ರಹೆನ್ಸಿವ್ ಆಗಿ ಎಲ್ಲಾ ಇಲಾಖೆಗಳೂ ಕೂಡಿ,

ಎಲ್ಲಾ ಇಲಾಖೆಗಳ ಅಧಿಕಾರಿಗಳು ಕೂಡಿ ಈ ಒಂದು ಸಮಯೋಚಿತವಾದ ಒಂದು ಯೋಜನೆಯನ್ನು ಹಾಕಿಕೊಂಡಾಗ ಮಾತ್ರ ಕಮ್ಯಾಂಡ್ ಏರಿಯಾ ಅಭಿವೃದ್ಧಿಯಾಗುತ್ತದೆಂದು ನಂಬಿರುವವರಲ್ಲಿ ನಾನೂ ಒಬ್ಬ. ಆದ್ದರಿಂದ ಅದನ್ನು ನಾನು ಬೆಂಬಲಿಸುವುದಿಲ್ಲ. ತಾವು ಇಂತಹ ಅಥಾರಿಟಿಗಳನ್ನು ನೇಮಿಸುವಾಗ ಅದಕ್ಕೆ ಮೆಂಬರ್‌ಗಳನ್ನು ನಾಮಿನೇಟ್ ಮಾಡುವಾಗ ಆ ಪ್ರದೇಶದಿಂದ ಬರತಕ್ಕಂಥವರನ್ನು ಬಿಟ್ಟು ಬೇರೆ ಬೇರೆ ಕಡೆಗಳಿಂದ ಬರತಕ್ಕಂಥವರನ್ನು ಅದರಲ್ಲಿ ಹಾಕುವುದರಿಂದ ಈ ಟಿ.ಎ.ಡಿ.ಎ. ವಿಚಾರದಲ್ಲಿ ತೊಂದರೆಗಳು ಬರುತ್ತವೆ. ಒಂದೆ ನಾವು ಕರ್ನಾಟಕ ವಿಶ್ವವಿದ್ಯಾನಿಲಯದವರನ್ನು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ, ಬೆಂಗಳೂರು ವಿಶ್ವವಿದ್ಯಾನಿಲಯದವರನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹಾಕಿ ಟಿ.ಎ.ಡಿ.ಎ. ವಿಚಾರದಲ್ಲಿ ಬರ್ಡನ್ ಬರುವ ರೀತಿಯಲ್ಲಿ ಮಾಡಿದ್ದೇವೆ. ಹಲವಾರು ಸಲ ಈ ವಿಶ್ವವಿದ್ಯಾನಿಲಯಗಳಲ್ಲಿ ಸಾರ್ವಜನಿಕ ಸಮಾರಂಭಗಳು ನಡೆಯುವಾಗ ಟಿ.ಎ.ಡಿ.ಎ. ಇಂದ ೪೦೦೦ ರೂಪಾಯಿಗಳು ವ್ಯಯವಾಗುತ್ತಿರುವುದನ್ನು ನಾವು ಖಂಡಿಸಿದ್ದೇವೆ. ಅಂತಹದ್ದು ಇನ್ನು ಮುಂದೆ ಬರದೇ ಇರುವಂತೆ ನೋಡಿಕೊಳ್ಳಬೇಕಾಗಿದೆ. ನಾವು ಹೆಚ್ಚಾಗಿ ಹಣಕಾಸಿನ ಬರ್ಡನ್ ಜನತೆಯ ಮೇಲೆ ಬೀಳದಂತೆ ನೋಡಿಕೊಂಡು, ಅಲ್ಲಿಯ ವಾತಾವರಣಕ್ಕೆ ಹೊಂದಿಕೊಂಡು ಹೋಗತಕ್ಕಂಥವರನ್ನು ಅಥಾರಿಟಿಗೆ ನಾಮಿನೇಟ್ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಇದರಲ್ಲಿರುವ ಎಲ್ಲ ವಿಚಾರಗಳನ್ನೂ ವಿಚಾರ ಮಾಡಲಾಗಿ ಈ ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಬಿಲ್‌ನಲ್ಲಿ ಕಮ್ಯಾಂಡ್ ಏರಿಯಾದ ಸರ್ವತೋಮುಖವಾದ ಅಭಿವೃದ್ಧಿಯ ಬಗ್ಗೆ ಹಾಗೂ ಜನಸಾಮಾನ್ಯರ ಪ್ರಗತಿಯ ಬಗ್ಗೆ ಅನೇಕ ವಿಚಾರಗಳು ಇದ್ದು ಇದು ರಾಜ್ಯದ ಪ್ರಗತಿಗೆ ಮಾರ್ಗದರ್ಶನವಾಗಿದೆ. ಇದರಲ್ಲಿ ಕೆಲವೊಂದು ಬದಲಾವಣೆಗಳು ಆದರೆ ಒಳ್ಳೆಯದೆಂದು ಹೇಳಿ ಈ ಒಂದು ಅಥಾರಿಟಿಯಲ್ಲಿ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ಶಾಸಕರಿಗೆ, ಹರಿಜನಗಿರಿಜನರಿಗೆ ಮತ್ತು ಕೃಷಿ ಕೂಲಿಗಾರರಿಗೆ ಅವಕಾಶ ಮಾಡಿಕೊಡಲು ಹಾಗೂ ಅವರಿಗೆ ಪ್ರಾತಿನಿಧ್ಯ ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ಕೆ. ತಕ್ಕೇದ್ (ಪರಸಗಡ).— ಮಾನ್ಯ ಅಧ್ಯಕ್ಷರೇ, ಈ ಕರ್ನಾಟಕ ರಾಜ್ಯದ ಕಮಾಂಡ್ ಏರಿಯಾ ಡೆವಲಪ್‌ಮೆಂಟ್ ಬಿಲ್ ನೀರಾವರಿ ಆಗುವಂಥ ಪ್ರದೇಶದ ಜನರಿಗೆ ಒಂದು ವರ ಪ್ರಸಾದದಂತೆ ಬಂದಿದೆ. ಇಲ್ಲಿಯವರೆಗೆ ಕೂಡ ಕಮಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿ ಮಾಡಲು ಇಂಥದೊಂದು ಬಿಲ್, ಆಗಿದ್ದು ಇಲ್ಲ. ಯಾರ್ಯಾರು ಈ ಯೋಜನೆಯನ್ನು ಪೂರ್ತಿಯಾಗಿ ಮಾಡಿದ್ದಾರೆಯೋ ಅವರಿಂದ ಈ ನೀರನ್ನು ಪಡೆಯುವಂಥ ರೈತರಿಗೆ ಇಲ್ಲಿಯವರೆಗೆ ಸರಿಯಾದ ಮಾರ್ಗದರ್ಶನ ಸಿಕ್ಕಿಲ್ಲ. ಈ ಕಮಾಂಡ್ ಏರಿಯಾ ಡೆವೆಲಪ್‌ಮೆಂಟ್ ಆಕ್ಟ್‌ನಿಂದ ಅಥಾರಿಟಿಯವರು ಚಾನಲ್‌ಗಳನ್ನು ಹೇಗೆ ಮಾಡಬೇಕು, ಕಾಲುವೆಗಳನ್ನು ಯಾವರೀತಿಯಿಂದ ತೆಗೆದುಕೊಂಡು ಬರಬೇಕು ಎಂಬ ಬಗ್ಗೆ ಅವರಿಗೆ ಅಧಿಕಾರ ಕೊಟ್ಟಿದ್ದಾರೆ. ಇದು ಬಹಳ ಪ್ರಮುಖವಾದದ್ದು. ಇದರಲ್ಲಿ ಕೆಲವು ಜನ ಜಮೀನ್ದಾರರು ತಮ್ಮ ಭೂಮಿಗಳನ್ನು ಕಳೆದುಕೊಳ್ಳುತ್ತಾರೆ ಎಂದು ತಿಳಿದುಕೊಂಡು ಅವರಿಗೆ ಅನುಕೂಲ ಮಾಡುವುದಕ್ಕಾಗಿ ಕೆನಾಲ್ ಕಡೆಯಿಂದ ಯಾವುದು ಹೆಚ್ಚು ಜಮೀನು ನೀರಾವರಿಯಾಗುವಂಥಾದ್ದು ಇರುತ್ತದೆ. ಅಂತಹ ಬಡವರ ಜಮೀನಿನೊಳಗೆ ಅವರಿಗೆ ಸ್ವಲ್ಪ ಜಮೀನು ಇದ್ದರೂ ಕೂಡ ಅಲ್ಲಿ ಇವತ್ತು ಕೆನಾಲ್‌ಗಳನ್ನು ಹಾಕಿಸಿಕೊಂಡು ಹೋದಂಥ ಉದಾಹರಣೆಗಳು ಇವೆ. ನನ್ನ ಮತದಾರರ ಕ್ಷೇತ್ರದಲ್ಲಿ ಮಲಪ್ರಭಾ ಯೋಜನೆ ಬಂದಿದೆ. ಈ ಮಲಪ್ರಭಾ ಯೋಜನೆಯಿಂದ ನನ್ನ ಮತದಾರರ ಕ್ಷೇತ್ರದಲ್ಲಿ ಸುಮಾರು ೧ ಲಕ್ಷ ಎಕರೆಯಷ್ಟು ಭೂಮಿ ಇವತ್ತು ನೀರಾವರಿಯಾಗುತ್ತದೆ. ಈ ಒಂದು ಕಾಯಿದೆಯಿಂದಾಗಿ ಇವತ್ತು ಸಾಮಾನ್ಯ ರೈತರಿಗೆ ಇದು ಲಾಭದಾಯಕವಾಗಿದೆ. ರೈತರ ಸರ್ವಾಂಗೀಣ ಉನ್ನತಿಗಾಗಿ ಈ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ ಎಂದು ನಾನು ತಿಳಿದು ಕೊಂಡಿದ್ದೇನೆ. ಇಲ್ಲಿಯವರೆಗೆ ರೈತರು ತಮಗೆ ನೀರು ಬರುತ್ತದೆಂದು ತಿಳಿದುಕೊಂಡು ತಮ್ಮದೆ ಅದಂಥ ರೀತಿಯಲ್ಲಿ ಅವರು ಭೂಮಿಯನ್ನು ಡೆವೆಲಪ್ ಮಾಡಿಕೊಂಡಿದ್ದಾರೆ. ನಮ್ಮ ಸವದತ್ತಿ ಭಾಗದಲ್ಲಿ ತೆಗೆದುಕೊಂಡರೆ ಸುಮಾರು ೨೦ ಸಾವಿರ ಎಕರೆ ಇವತ್ತು ನೀರಾವರಿಯಾಗಿದೆ. ಇವತ್ತು ಅಲ್ಲಿಗೆ ಅವಸರವಾಗಿ ನೀರು ಬಂದಿದೆ. ಹೀಗೆ ಅವಸರ ಅವಸರವಾಗಿ ನೀರು ಬಂದದ್ದರಿಂದ ಕೆಲವು ಜನರು ಅವಸರದಿಂದ ಭೂಮಿಯನ್ನು ಸಂಪಾದನೆ ಮಾಡಿಕೊಳ್ಳುವಾಗ ಬೇರೆ ಕೆಳಗಿನ ಜನರಿಗೆ ನೀರು ಬರದಂತೆ ಕೆಲವೊಂದು ಕೆನಾಲ್‌ಗಳನ್ನು ಹಾಕಿರುವುದರಿಂದ ಬಹಳ ಜನರಿಗೆ ತೊಂದರೆಯಾಗಿದೆ. ಈಗ ಈ ಒಂದು ಕಮಾಂಡ್ ಏರಿಯಾ ಡೆವೆಲಪ್‌ಮೆಂಟ್ ಅಥಾರಿಟಿಯನ್ನು ಮಾಡಿ ಇವತ್ತು ಯಾವ ಭೂಮಿ ಡೆವೆಲಪ್ ಆಗಬೇಕಾಗಿದೆ. ಯಾವ ಭೂಮಿ

ಸುಧಾರಣೆಯಾಗಬೇಕಾಗಿದೆ ಎಂಬ ಬಗ್ಗೆ ಒಂದು ಯೋಜನೆಯನ್ನು ತಾವು ಹಾಕಿಕೊಟ್ಟಿದ್ದೀರಿ. ಇದು ಅಂತಹ ಜನರಿಗೆ ನಿಜವಾಗಿಯೂ ಒಂದು ವರವಾಗಿ ಪರಿಣಮಿಸುತ್ತಾ ಇದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇವತ್ತಿನ ದಿವಸ ಕೆನಾಲ್‌ಗಳು ಇರುವ ಕಡೆ ಕೆಲವು ಜನರಿಗೆ ಯಾವ ಭೂಮಿಯಲ್ಲಿ ವರಲಕ್ಷ್ಮಿ ಹತ್ತಿ ಬೆಳೆಯಬಹುದು, ಗೋಧಿ ಬೆಳೆಯಬಹುದು, ಜೋಳ ಬೆಳೆಯಬಹುದು ಎಂದು ಗೊತ್ತಿಲ್ಲದೇ ಅವರವರ ಭೂಮಿಯಲ್ಲಿ ಬೇರೆ ಬೇರೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಇವತ್ತಿನ ದಿವಸ ಭೂಮಿಯ ಮಣ್ಣನ್ನು ಪರೀಕ್ಷೆ ಮಾಡುವಂಥ ಖಾತೆಯವರು ಈ ಭೂಮಿಗಳ ಮಣ್ಣನ್ನು ಪಡೆದುಕೊಂಡು ಹೋಗಿ ಇಂತಹ ಭೂಮಿಯಲ್ಲಿ ಈ ತರಹದ ಬೆಳೆಯನ್ನು ಹಾಕಿದ್ದಾರೆ ಯೋಗ್ಯರೀತಿಯ ಬೆಳೆ ಬಂದು ರೈತನು ಹುಲುಸಾಗಿ ಬೆಳೆ ಬೆಳೆಯಬಹುದು ; ಅವನು ಪಟ್ಟ ಶ್ರಮಕ್ಕೆ ಯೋಗ್ಯ ಉತ್ಪಾದನೆಯಾಗಬಹುದು ಎನ್ನತಕ್ಕಂಥ ವಿಷಯವನ್ನು ಅವರಿಗೆ ಹೇಳುತ್ತಿದ್ದಾರೆ. ಇದರಿಂದ ಅವರಿಗೆ ಬಹಳ ಅನುಕೂಲವಾಗುತ್ತಾ ಇದೆ. ಈ ಬಿಲ್ಲಿನ ಡೆಫನಿಷನ್ ಒಳಗೆ ಇರುವಂಥ ಎಲ್ಲಾ ವಿಚಾರಗಳನ್ನು ನಾವು ನೋಡಿದರೆ ಇದರಿಂದ ಪ್ರತಿಯೊಂದು ದೃಷ್ಟಿಯಲ್ಲಿಯೂ ರೈತರಿಗೆ ಉಪಯುಕ್ತವಾಗಿದೆ ಎಂದು ಅನ್ನಿಸುತ್ತದೆ. ಇವತ್ತು construction and upgrading of ayacut roads with related structures ಎಂದು ಏನಿದೆ ಇದು ಬಹಳ ಪ್ರಾಮುಖ್ಯವಾದ್ದಾಗಿದೆ. ಇವತ್ತು ನನ್ನ ಭಾಗದಲ್ಲಿ ಏನಾಗಿದೆ ಎಂಬುದನ್ನು ನನ್ನ ಅನುಭವದಿಂದ ಹೇಳುವುದಾದರೆ ಅಲ್ಲಿಯ ರೈತರಿಗೆ ನೀರು ಬಂದಕೂಡಲೇ ಬಂಗಾರ ಸಿಕ್ಕಾಂತಾಗಿದೆ. ಆ ರೈತರು ಒಂದು ಹನಿ ನೀರನ್ನು ಕೂಡ ಬಿಡುವುದಕ್ಕೆ ತಯಾರು ಇಲ್ಲ. ೮-೧೦ ವರ್ಷಗಳಿಂದ ಬರಗಾಲ ಇದ್ದಂಥ ಪ್ರದೇಶದಲ್ಲಿ ಇವತ್ತು ನೀರಾವರಿಯಾಗಿರುವುದರಿಂದ ಯಾವ ರೈತನೂ ಒಂದು ಹನಿ ನೀರನ್ನು ಬಿಡದೆ ಎಲ್ಲಾ ಕಡೆ ಆ ನೀರನ್ನು ಉಪಯೋಗ ಮಾಡಿಕೊಂಡಿದ್ದಾರೆ. ಇವತ್ತು ಸರ್ಕಾರಿ ರಸ್ತೆಗಳು, ಸಣ್ಣ ಸಣ್ಣ ಆಯಕಟ್ಟಿನ ರಸ್ತೆಗಳು ಮುಚ್ಚಿಹೋಗಿವೆ. ಎಲ್ಲಾ ಕಡೆ ಹಚ್ಚ ಹಸಿರು ಪೈರು ಬಂದಿದೆ, ಒಂದೊಂದು ಕಡೆ ವರಲಕ್ಷ್ಮಿ ಹತ್ತಿ ಕಾಣಿಸುತ್ತಾ ಇದೆ. ಇವತ್ತಿನ ದಿವಸ ಪ್ರತಿಯೊಬ್ಬರೂ ತಮ್ಮ ತಮ್ಮ ಜಮೀನಿಗೆ ೩ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಇವತ್ತಿನ ದಿವಸ ೮ ಸಾವಿರ ರೂಪಾಯಿಗಳ ಉತ್ಪತ್ತಿ ಪಡೆಯಲು ಅವಕಾಶವಾಗಿದೆ. ನಾನು ನನ್ನ ಜಮೀನಿನಲ್ಲಿ ಹತ್ತಿ ಹಾಕಿದ್ದೇನೆ. ನನ್ನ ೮ ಎಕರೆ ಜಮೀನಿನಲ್ಲಿ ಇವತ್ತು ೩೬ ಗುಂಟೆ ವಿಸ್ತೀರ್ಣದಲ್ಲಿ ವರಲಕ್ಷ್ಮಿ ಹತ್ತಿ ಬಂದಿದೆ. ನಮ್ಮ ಕಡೆ ಭೂಮಿ ನೀರಾವರಿಯಾಗಿರುವುದರಿಂದ ಹತ್ತಿ ಬೆಳೆಯೂ ಬಂದಿದೆ. ಅದಕ್ಕೆ ತಕ್ಕಂಥ ಗಂಟೂ ಬಂದಿದೆ. ತಾವು ರೈತರಿಗೆ ನೀರು ಕೊಟ್ಟಿರುವುದರಿಂದ ಹೊಲದಲ್ಲಿ ಟ್ರ್ಯಾಕ್ಟರ್ ತೆಗೆದುಕೊಂಡು ಹೋಗಿ ಬೆಳೆ ತೆಗೆಯುವುದು ಅಸಾಧ್ಯವಾಗಿದೆ. ತಾವು ಮಣ್ಣಿನ ಪರೀಕ್ಷೆ ಮಾಡುವ ಬಗ್ಗೆ ಮತ್ತು ಆಯಕಟ್ಟು ರಸ್ತೆಗಳನು ಅಪ್‌ಗ್ರೇಡ್ ಮಾಡುವ ಎರಡು ಪ್ರಾಮುಖ್ಯವಾದ ವಿಚಾರಗಳನ್ನು ಇದರಲ್ಲಿ ಹೇಳಿದ್ದೀರಿ. ಈ ಎರಡು ವಿಚಾರಗಳಿಗೂ ತಾವು ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರದವರನ್ನು ಕೇಳಿಕೊಳ್ಳುತ್ತಿದ್ದೇನೆ.

ಇವತ್ತು ರೈತರಿಗೆ ನೀರಿನ ಸದುಪಯೋಗವಾಗುತ್ತಿದೆ. ಆದರೂ ಕೂಡ ಅದು ವ್ಯವಸ್ಥಿತ ರೀತಿಯಿಂದ ಸದುಪಯೋಗವಾಗಬೇಕಿತ್ತು ಎಂದರೆ : ಎಲ್ಲ ಆಯಕಟ್ಟಿನ ರಸ್ತೆಗಳು ಆಗಬೇಕು. ಅದು ಆಗದೇ ನೀರಿನ ಸದುಪಯೋಗ ಆದರೂ ಕೂಡ ಅದು ಸರಿಯಾಗಿ ಆಗಿರಲಿಕ್ಕೆ ಇಲ್ಲ. ರೈತರು ವರಲಕ್ಷ್ಮಿ ಹಾಕಿದ್ದಾರೆ ; ಗೋಧಿ ಹಾಕಿದ್ದಾರೆಯೋ ಎಂದು ಏನಾದರೂ ನೋಡುವುದಕ್ಕೆ ಹೊಲದೊಳಗೆ ಹೋದರೆ ಗುದ್ದಲಿ ತೆಗೆದುಕೊಂಡು ಹೊಡೆಯಲಿಕ್ಕೆ ಬರುತ್ತಾರೆ. ಇವತ್ತಿನ ದಿವಸ ಸರ್ಕಾರದವರು ನೀರು ಕೊಟ್ಟು ಚನ್ನಾಗಿ ಬೆಳೆ ಬರುವಂತಹ ಪ್ರದೇಶದಲ್ಲಿ ಆಯಕಟ್ಟಿನ ರಸ್ತೆಗಳನ್ನು ಕೂಡಲೇ ಮಾಡಿಸದಿದ್ದರೆ ಆ ಹಳ್ಳಿಗಳಿಗೆ ಹೋಗುವುದು ಬಹಳ ಕಷ್ಟವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಭಾಗದ ಒಂದು ಹಳ್ಳಿಯಲ್ಲಿ ಒಂದು ಎಕರೆ ಒಂದು ಚೀಲ ಗೋಧಿ ಕೂಡ ಬರುತ್ತಿರಲಿಲ್ಲ. ಅಂಥ ಕಡೆ ಈಗ ೧೦-೧೫ ಕ್ವಿಂಟಾಲ್ ಬರುತ್ತಿದೆ. ಒಂದು ವರ್ಷಕ್ಕೆ ನೂರು ರೂಪಾಯಿ ಕೂಡ ಉತ್ಪತ್ತಿ ಬಾರದೆ ಇದ್ದಂತಹ ಸ್ಥಳದಲ್ಲಿ ಇವತ್ತು ೬-೮ ಸಾವಿರ ರೂಪಾಯಿನ ಉತ್ಪತ್ತಿ ಬರಲಿಕ್ಕೆ ಹತ್ತಿದೆ. ಆದರೆ ಆ ಊರಿಗೆ ಹೋಗಲಿಕ್ಕೆ ಒಂದು ರಸ್ತೆ ಕೂಡ ಇಲ್ಲ. ಅಲ್ಲಿ ಇದ್ದಂತಹ ಕಾಲು ದಾರಿಗಳಿಗೆ ಮತ್ತು ಬಂಡಿ ರಸ್ತೆಗಳಿಗೆಲ್ಲ ಕೆಡುನೀರು ಬಂದು ಕೂಡಿದೆ. ಎರೆ ಮಣ್ಣಿನಲ್ಲಿ ಟ್ರ್ಯಾಕ್ಟರ್ ಸಿಕ್ಕಿಕೊಳ್ಳುತ್ತದೆ, ಚಕ್ಕಡಿಗಳು ಸಿಕ್ಕಿಕೊಳ್ಳುತ್ತವೆ. ದನಗಳ ದೇಹ ಅರ್ಧರ್ಧ ಒಳಗೇ ಹೋಗುತ್ತದೆ. ಆಕಳು, ಎಮ್ಮೆಗಳು ಸಿಕ್ಕಿಕೊಳ್ಳುತ್ತವೆ. ಆದ್ದರಿಂದ ಈ ಮಸೂದೆ ಕಾರ್ಯರೂಪಕ್ಕೆ ಬರುವ ಪೂರ್ವದಲ್ಲಿ ಆಯಕಟ್ಟಿನ ರಸ್ತೆಗಳನ್ನು ಸುಧಾರಿಸಬೇಕು ಮತ್ತು ರೈತರಿಗೆ ಇದರಿಂದ ಬಹಳ ಉಪಯೋಗವಾದೀತೆಂದು ನನ್ನಗನ್ನಿಸುತ್ತದೆ. ಆಯಕಟ್ಟಿನ ರಸ್ತೆಗಳನ್ನು ಮಾಡುವ ಪ್ರಾಮುಖ್ಯತೆಯನ್ನು ಇದರಲ್ಲಿ ಕೊಟ್ಟಿದ್ದೀರಿ, ಅದಕ್ಕೆ ಅಥಾರಿಟಿ ಬಂದ ಮೇಲೆ ಆ ಅಥಾ

ರಿಟಿಯಲ್ಲಿ ಆಯಾಯ ಪ್ರದೇಶದವರೇ ಇರಬೇಕು ; ಹೊರಗಿನವರು ಒಬ್ಬರೂ ಇರತಕ್ಕದ್ದಲ್ಲ. ಈ ಬಗ್ಗೆ ಆ ಪ್ರದೇಶದ ಮಾನ್ಯ ಮಿತ್ರರುಗಳು ಕೂಡ ಹೇಳಿದ್ದಾರೆ, ಮತ್ತು ನನ್ನ ಅನುಭವದ ಪ್ರಕಾರ ಆಯಕಟ್ಟಿನ ಕಮ್ಯಾಂಡ್ ಏರಿಯಾದ ಅಥಾರಿಟಿಯಲ್ಲಿ ಹೊರಗಿನ ಯಾವುದೇ ಅಧಿಕಾರಿಗಳು ಕೂಡ ಇರಬಾರದು. ಅದು ಮಲಪ್ರಭಾ, ಘಟಪ್ರಭಾ ತುಂಗಭದ್ರ ಕಪಿಲಾ ಯೋಜನೆಯಾಗಿರಲಿ ಅಥವಾ ಯಾವುದೇ ಯೋಜನೆಯಾಗಿರಲಿ ಅಲ್ಲಿ ಡಿವಿಜನಲ್ ಕಮೀಷನರ್, ಡೆಪ್ಯುಟಿ ಕಮೀಷನರ್ ಹಾಗೂ ಸರ್ಕಾರದಿಂದ ಆರಿಸಿದಂತಹ ಅಧ್ಯಕ್ಷರ ಜೊತೆಗೆ ಆಯಾಯ ಭಾಗದ ಸ್ಥಳೀಯರು ಇರಲೇಬೇಕು. ಇವತ್ತಿನ ದಿವಸ ಆಯಕಟ್ಟಿನ ಕೆನಾಲ್‌ಗಳ ಕೆಲವು ಕಡೆ ನೀರನ್ನು ಬಿಡುತ್ತಾರೆ, ಕೆಲವು ಕಡೆ ಬಿಡುವುದಿಲ್ಲ. ಮತ್ತು ಏರಿ ಪ್ರದೇಶಗಳಲ್ಲಿ ಕೆಂಪು ಮಣ್ಣು ಹಾಕಿ ಕೆಲವೊಂದು ಕೆನಾಲ್‌ಗಳನ್ನು ಮಾಡಿದ್ದಾರೆ ; ಈಗಾಗಲೇ ಅವು ಒಡೆದು ಹೋಗಿವೆ. ಕೊರಕಲು ಬಿದ್ದು ಹೋಗಿವೆ. ಅವುಗಳನ್ನು ದುರಸ್ತಿ ಕೂಡ ಮಾಡಿಲ್ಲ. ಎಷ್ಟೋ ಜಮೀನು, ಹೆಚ್ಚಾಗಿ ನೀರು ಬಾರದೆ ಇರುವುದರಿಂದ ಚೌಳು ಭೂಮಿಯಾಗಿದೆ. ಅದಕ್ಕೆಲ್ಲ ಕಾರಣ, ಅಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ಮಾಡದೇ ಇರುವುದು. ಇವತ್ತಿನ ದಿವಸ ಕೇಳಿದರೆ ಎಕ್ಸಿಕ್ಯೂಟೀವ್ ಇಂಜಿನಿಯರ್ ಆಗಲಿ ಸೂಪರಿಂಟೆಂಡಿಂಗ್ ಇಂಜಿನಿಯರ್ ಆಗಲಿ, ಚೀಫ್ ಇಂಜಿನಿಯರ್ ಆಗಲಿ, ನಾವೇನು ಮಾಡೋಣ ಸರ್ಕಾರದಿಂದ ಇಷ್ಟು ಹಣ ಬಂದಿತ್ತು ಇಷ್ಟನ್ನು ನಾವು ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. ಅದನ್ನು ಕನ್‌ಸ್ಟ್ರಕ್ಷನ್ ಮಾಡಿದ ಕಂಟ್ರಾಕ್ಟರ್ ಯಾರಿದ್ದಾರೆ ಅವರು ಯೋಗ್ಯ ರೀತಿಯಿಂದ ಕೆಂಪು ಮಣ್ಣು ಹಾಕಿ ಮಾಡಿದ್ದರೆ ಈ ದುರುಪಯೋಗ ಆಗುತ್ತಿರಲಿಲ್ಲ. ಆದರಿಂದ ಅದಕ್ಕೆ ಅಥಾರಿಟಿ ಮಾಡುವುದರಿಂದ ಈ ಯಾವ ತೊಂದರೆಗಳು ಮುಂದೆ ಬರಲಿಕ್ಕೆ ಅವಕಾಶವಾಗುವುದಿಲ್ಲ. ಇವತ್ತಿನ ದಿವಸ ಅಥಾರಿಟಿಗೆ ಒಳ್ಳೆಯ ಕಲಿತವರ ಅವಶ್ಯಕತೆ ಇಲ್ಲ. ಛೇರ್ಮನ್ನರು, ಎಕ್ಸಿಕ್ಯೂಟೀವ್ ಇಂಜಿನಿಯರ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಚೀಫ್ ಇಂಜಿನಿಯರ್ ಇರುತ್ತಾರೆ, ಅವರ ಜೊತೆಗೆ ಕಮ್ಯಾಂಡ್ ಏರಿಯಾದಲ್ಲಿ ಬರತಕ್ಕ ನೀರಾವರಿ ಪ್ರದೇಶಗಳನ್ನು ಅಭಿವೃದ್ಧಿ ಮಾಡುತ್ತಿರುವ ರೈತರು ನಿಜವಾಗಿಯೂ ಅನುಭವಿಕರು ; ಆದ್ದರಿಂದ ಅವರಿಗೆ ಮುಖ್ಯವಾಗಿ ಪ್ರಾಮುಖ್ಯತೆ ಕೊಡಬೇಕು ; ಅವರು ಹೆಬ್ಬೆಟ್ಟಿನವರೇ ಇರಲಿ ; ಆದರೂ ಕೂಡ ಅವರಿಗೆ ಒಕ್ಕಲುತನದಲ್ಲಿ ಒಳ್ಳೆಯ ಅನುಭವ ಇರುತ್ತದೆ. ಅವರ ಒಂದು ಅನುಭವದಿಂದ ಈ ಕಾರ್ಯ ಆಗಬೇಕು. ಈ ಮಸೂದೆಯಲ್ಲಿ ಎಲ್ಲರೂ ನೋಡಿರುವ ಹಾಗೆ ಅಥಾರಿಟಿಯೊಳಗೆ ಐದು ಮಂದಿ ರಾಜ್ಯ ಸರ್ಕಾರದಿಂದ ನಾಮ ನಿರ್ದೇಶನ ಹೊಂದಿದ ಸದಸ್ಯರುಗಳು ಇರುತ್ತಾರೆಂಬುದು ಸರಿಯಷ್ಟೆ. ಆದರೆ ಇದರಲ್ಲಿ ಇನ್ನು ಒಂದು ಅಂಶವನ್ನು ಸೇರಿಸಬೇಕೆಂದು ಹೇಳಬಯಸುತ್ತೇನೆ. ಅದೇನೆಂದರೆ, ಮಲಪ್ರಭಾ ಯೋಜನೆ ಇರಲಿ, ಘಟಪ್ರಭಾ ಯೋಜನೆ ಇರಲಿ ಅಥವಾ ಯಾವುದೇ ಯೋಜನೆ ಇರಲಿ. ಅದರಿಂದ ಯಾರಿಗೆ ಅಭಿವೃದ್ಧಿಯಾಗುತ್ತಿದೆ ಆ ಭಾಗದಲ್ಲಿ ಎಷ್ಟೇ ಮಂದಿ ಶಾಸಕರಿರಲಿ ಅವರನ್ನು ಕೂಡ ಕಂಪಲ್ಸರಿಯಾಗಿ ಈ ಅಥಾರಿಟಿಗೆ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಇಲ್ಲದಿದ್ದರೆ, ಖಂಡಿತವಾಗಿಯೂ ಇವತ್ತು ಪ್ರಜಾಪ್ರಭುತ್ವದ ರೀತಿಯಿಂದ ಯಾರು ಶಾಸಕರಾಗಿ ಬಂದಿದ್ದಾರೆ ಅವರಿಗೆ ರೈತರ ಸಮಸ್ಯೆಗಳನ್ನು ಸರ್ಕಾರಕ್ಕೆ ತಿಳಿಸುವುದು ಅಸಾಧ್ಯವಾದೀತು. ಆದ್ದರಿಂದ ಆಯಾಯ ಭಾಗದಲ್ಲಿರುವ ಶಾಸಕರುಗಳನ್ನು ಈ ಅಥಾರಿಟಿಯಲ್ಲಿ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಿಜವಾಗಿಯೂ ಶಾಸಕರು ಅಲ್ಲಿನ ಸಮಸ್ಯೆಗಳನ್ನು ತಿಳಿದುಕೊಂಡು ಸರ್ಕಾರಕ್ಕೆ ತಿಳಿಸುವ ಸಾಧ್ಯತೆ ಇದೆ. ಆದಕಾರಣ ಇದರಲ್ಲಿ, ರೈತರ ಸಮಸ್ಯೆಗಳನ್ನು ತಿಳಿದುಕೊಂಡು ಸರ್ಕಾರಕ್ಕೂ ಮತ್ತು ಜನತೆಗೂ ಸಂಬಂಧವನ್ನು ಕಲ್ಪಿಸಿಕೊಡುವ ಶಾಸಕರು ಇದರಲ್ಲಿ ಇರಲೇಬೇಕು ; ಈ ಒಂದು ದೋಷ ಇದರಲ್ಲಿ ಇದೆ ಎಂದು ನನಗೆ ಅನ್ನಿಸುತ್ತದೆ ಮತ್ತು ಅನೇಕ ಮಿತ್ರರುಗಳೂ ಕೂಡ ಈ ಮಾತನ್ನು ಹೇಳಿದ್ದಾರೆ. ಈ ಬಗ್ಗೆ ಸರ್ಕಾರ ಸಂಪೂರ್ಣ ಗಮನ ಕೊಟ್ಟು ಕಮ್ಯಾಂಡ್ ಏರಿಯಾದಲ್ಲಿ ಆರಿಸಿಬಂದಿರುವಂತಹ ಶಾಸಕರುಗಳನ್ನು ಆಯಾಯ ಭಾಗದಲ್ಲಿ ನೇಮಕ ಮಾಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ, ಹೇಳುವುದಾದರೆ, ತೋಟಗಾರಿಕೆ, ರೇಷ್ಮೆ ಉದ್ಯೋಗ ಮತ್ತು ಹೈನುಗಾರಿಕೆ ಇವು ಮೂರೂ ಬಹಳ ಪ್ರಾಮುಖ್ಯವಾದವುಗಳಾದ್ದರಿಂದ ಇವುಗಳು ಸರಿಯಾದ ರೀತಿಯಲ್ಲಿ ಅಭಿವೃದ್ಧಿಯಾಗಬೇಕು. ಆದರೆ ಇಲ್ಲಿ ಮಲತಾಯಿ ಧೋರಣೆ ನಡೆಯುತ್ತಿದೆ ಎಲ್ಲಿ ನೀರು ಚನ್ನಾಗಿ ಇರುತ್ತದೋ ಅಲ್ಲಿ ಈ ಮೂರು ಉದ್ಯೋಗಗಳೂ ಚೆನ್ನಾಗಿ ನಡೆಯುತ್ತವೆ. ಈಗ ಅಲ್ಲಿರತಕ್ಕ ಅಸಿಸ್ಟೆಂಟ್ ಆಫೀಸರನ್ನು ಫೀಲ್ಡ್ ಆಫೀಸರ್ ಎಂದು ಮಾಡಿ, ಸಣ್ಣ ಸಣ್ಣ ಫಾರಮ್‌ಗಳನ್ನು ಮಾಡಿ ಅಲ್ಲಿ ಇಟ್ಟಿದ್ದಾರೆ. ಸಾಕಷ್ಟು ಕೋಡಿ ನೀರು ಹೋಗತಕ್ಕ ಪ್ರದೇಶಗಳಲ್ಲಿ ತೋಟಗಾರಿಕೆ ಮಾಡುವವರಿಗೆ

ಪ್ರೋತ್ಸಾಹ ನೀಡಿದರೆ ಹಣ್ಣು ಹಂಪಲುಗಳನ್ನು ಬೆಳೆಯಲು ಮತ್ತು ಹೂದೋಟಗಳನ್ನು ಮಾಡಲು ಅವಕಾಶವಾಗುತ್ತದೆ. ಆದರೆ ಈಗ ದೊಡ್ಡ ಪ್ರಮಾಣದಲ್ಲಿ ಕೋಡಿ ನೀರು ಹೊಳೆಗೆ ಹೋಗಿ ಕೂಡುತ್ತಿದೆ. ಇವತ್ತಿನ ದಿವಸ ತೋಟಗಾರಿಕೆ ಇಲಾಖೆಯವರು ನಿಜವಾಗಿಯೂ ಈ ಒಂದು ಕಾರ್ಯವನ್ನು ಅಭಿವೃದ್ಧಿ ಮಾಡುವ ಸಲುವಾಗಿ ಆಯಾಯ ಭಾಗದಲ್ಲಿರುವ ಯೋಜನೆಯ ಕೆಳಗಡೆ ಸಾಕಷ್ಟು ರೀತಿಯಿಂದ ಕಾರ್ಯ ಮಾಡಲು ಅವಕಾಶ ಇದೆ ; ದೊಡ್ಡ ದೊಡ್ಡ ಫಾರಮ್‌ಗಳನ್ನು ಮಾಡಲು ಸಾಧ್ಯತೆ ಇದೆ. ಇವತ್ತಿನ ದಿವಸ ಭೂಸುಧಾರಣಾ ಕಾಯಿದೆಯ ಪ್ರಕಾರ ನೂರಾರು ಎಕರೆ ಭೂಮಿ ಸಿಗುತ್ತದೆ. ಅಂಥ ಭೂ ಪ್ರದೇಶಗಳನ್ನು ತೋಟಗಾರಿಕೆ ಇಲಾಖೆಯವರು, ರೇಷ್ಮೆ ಇಲಾಖೆಯವರು ಮತ್ತು ಅನಿಮಲ್ ಹಸ್ಬೆಂಡರಿಯವರು ತೆಗೆದುಕೊಂಡು ಸಾಕಷ್ಟು ಹಣ ಖರ್ಚು ಮಾಡಿ ಜನರ ಒಂದು ಅಭಿವೃದ್ಧಿ ಕಾರ್ಯಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯವರು ಸುಮಾರು ೨೦-೨೫ ಎಕರೆಯಷ್ಟು ಜಾಗವನ್ನು ತೆಗೆದುಕೊಂಡು ಅಲ್ಲಿ ಮಲಬರಿ ಗಿಡಗಳನ್ನು ಹಚ್ಚಿ ಪ್ರಾಯೋಗಿಕವಾಗಿ ಮಾಡಿದ್ದಾರೆ ; ಅದು ಚೆನ್ನಾಗಿ ಬಂದಿದೆ. ಅದು ಬಹಳ ಸ್ತುತ್ಯವಾದುದು. ಅದೇ ರೀತಿ, ಅಂಥ ಜಮೀನು ನೂರಾರು ಎಕರೆಗಳು ಸಿಗುವುದರಿಂದ ಅದನ್ನೆಲ್ಲ ತೆಗೆದುಕೊಂಡ ಅಭಿವೃದ್ಧಿ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಆ ಒಂದು ಕಾರ್ಯಕ್ಕೆ ಸಂಬಂಧಪಟ್ಟ ಇಲಾಖೆಯ ಡೈರೆಕ್ಟರ್ ರವರು ಸದಸ್ಯರಾಗಬೇಕು ; ಇದರಿಂದ ಆ ಒಂದು ಪ್ರದೇಶದ ಅಭಿವೃದ್ಧಿಗೆ ಬಹಳ ಅನುಕೂಲವಾಗುತ್ತದೆ. ಒಟ್ಟಿನಲ್ಲಿ, ಈ ಒಂದು ಮಸೂದೆ ನಿಜವಾಗಿಯೂ ಜನರ ಒಂದು ಅಭಿವೃದ್ಧಿಗೆ ತುಂಬ ಸಹಾಯಕವಾಗಿದೆಯಾಂಥ ಸುತ್ಯಾರ್ಹವಾದ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ ; ಮತ್ತು ಇದು ಆದಷ್ಟು ಜಾಗ್ರತೆಯ ಕಾರ್ಯರೂಪಕ್ಕೆ ಬಂದು ಜನತೆಯ ಆಶೋತ್ತರಗಳನ್ನು ಈಡೇರಿಸಲಿ ಎಂದು ಆಶಿಸುತ್ತೇನೆ. ಸರ್ಕಾರದ ಇಂಥ ಸುತ್ಯಾರ್ಹವಾದ ಕಾಯಿದೆಯನ್ನು ಜನರೂ ಕೂಡ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ಹೇಳುತ್ತಾ ಈ ಮಸೂದೆಗೆ ತಾವುಗಳೆಲ್ಲರೂ ಸಂಪೂರ್ಣ ರೀತಿಯಿಂದ ಬೆಂಬಲಿಸುತ್ತೀರೆಂದು ನಂಬಿ, ಮಾನ್ಯ ಅಧ್ಯಕ್ಷರು ಇಷ್ಟು ವೇಳೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ-ನನ್ನ ವಂದನೆಗಳನ್ನು ಸಲ್ಲಿಸುತ್ತಾ, ನನ್ನ ಈ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಪಿ. ಪಿ. ಹೆಗರೆ (ಚಿಕ್ಕೋಡಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ಸದನದ ಮುಂದೆ ತಂದಿರತಕ್ಕ ಕಮಾಂಡ್ ಏರಿಯಾ ಡೆವಲಪ್‌ಮೆಂಟ್ ಬಿಲ್‌ನ್ನು ಸ್ವಾಗತಿಸಿ ಕೆಲವು ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ಇಚ್ಛಿಪಡುತ್ತೇನೆ. ಈಗಾಗಲೇ ನನ್ನ ಮಿತ್ರರು ಅನೇಕ ವಿಷಯಗಳ ಬಗ್ಗೆ ಮಾತನಾಡಿದ್ದಾರೆ ? ಕೃಷಿ ಪ್ರಧಾನವಾದ ಈ ದೇಶದಲ್ಲಿ ಇಂಥ ಒಂದು ಬಿಲ್ ಬರುವುದು ಅತ್ಯಂತ ಅವಶ್ಯಕತೆ ಇತ್ತು, ಮಾನ್ಯ ಮಂತ್ರಿಗಳು ಅಂತ ಒಂದು ಬಿಲ್‌ನ್ನು ತಂದಿದ್ದಕ್ಕೆ ನಾನು ಅವರನ್ನು ವಂದಿಸುತ್ತೇನೆ. ಇದರಿಂದ ನಮ್ಮ ರಾಜ್ಯದಲ್ಲಿ ಕೃಷಿ ಕ್ಷೇತ್ರದಲ್ಲಿ ಒಂದು ಅದ್ಭುತ ಸಾಧನೆಯನ್ನು ಬಯಸಿದ್ದೇವೆ. ಕೆನಡಾ ಮತ್ತು ಅಮೇರಿಕಾ ದೇಶಗಳಲ್ಲಿ ೧೦೦ಕ್ಕೆ ೭-೮ ಮಂದಿ ಕೃಷಿ ಕ್ಷೇತ್ರದಲ್ಲಿ ಕೆಲಸಮಾಡಿ, ಪರದೇಶಗಳಿಗೆ ಆಹಾರವನ್ನು ಕಳುಹಿಸುತ್ತಿದ್ದಾರೆ. ಜಪಾನ್ ದೇಶದಲ್ಲಿ ನಮಗಿಂತ ೫-೧೦ ಪಟ್ಟು ಜಾಸ್ತಿ ಉತ್ಪನ್ನವನ್ನು ಮಾಡುತ್ತಾರೆ. ನಮ್ಮ ದೇಶದಲ್ಲಿ ಅಂತ ಪ್ರಗತಿ ಏತಕ್ಕೆ ಆಗಿಲ್ಲ ? ನಾವುಗಳು ಇದುವರೆಗೆ ನಿಸರ್ಗದ ಮೇಲೆ ಅವಲಂಭಿಸಿ ಬೆಳೆ ಬೆಳೆಯುತ್ತಿದ್ದೆವು ? ಆದರೆ ಇವೊತ್ತಿನ ಯುಗದಲ್ಲಿ, ಈ ಜಗತ್ತಿನೊಳಗೆ, ಪ್ರತಿಯೊಂದು ದೇಶಗಳು ಪ್ರಗತಿ ಸಾಧಿಸುವಂತ ಕಾಲದಲ್ಲಿ ನಾವು ಕೂಡ ಮುಂದೆ ಹೋಗಬೇಕಾಗಿದೆ. ನೀರಾವರಿ ಸಾಧನಗಳನ್ನು ಹೆಚ್ಚು ಹೆಚ್ಚು ಪ್ರಾಶಸ್ತ್ಯ ಕೊಟ್ಟು ಕೆಲಸ ಮಾಡಬೇಕಾಗಿದೆ. ಆದರೆ, ಬರೀ ನೀರಾವರಿ ಮಾತ್ರದಿಂದ ರೈತನು ಪ್ರಗತಿಯಾಗುವುದಿಲ್ಲ. ನಮ್ಮ ರೈತ ಅಷ್ಟು ಜ್ಞಾನಿ ಅಲ್ಲ ಆತ ಇನ್ನು ಅಜ್ಞಾನದಲ್ಲಿಯೇ ಇದ್ದಾನೆ ? ಶಾಸ್ತ್ರೋಕ್ತ ರೀತಿಯಲ್ಲಿ ವಕ್ಕಲುತನ ಮಾಡುವ ವಿಷಯ ಆತ ಇನ್ನೂ ಕಲಿತಿಲ್ಲ ಇವತ್ತು ಶಾಸ್ತ್ರೋಕ್ತರೀತಿಯಲ್ಲಿ ವಕ್ಕಲುತನ ಮಾಡುವುದನ್ನು ಈ ದೇಶದ ರೈತನಿಗೆ ಸರ್ಕಾರ ಕಲಿಸಿಕೊಡಬೇಕಾಗಿದೆ. ಎಲ್ಲೆಲ್ಲಿ ನೀರಾವರಿ ಯೋಜನೆಗಳನ್ನು ಮಾಡಿದ್ದಾರೋ, ಅಂಥ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಬೇಕು. ಮಾನ್ಯ ಆಮುರ್ಗಂರವರು ಹೇಳಿದಂತೆ ಇವೊತ್ತು ಯಾವುದೇ ಕ್ಷೇತ್ರದಲ್ಲಿ ಅಭಿವೃದ್ಧಿಯಾದರೂ ಕೂಡ ಅದರ ಉಪಯೋಗ ಯಾರಿಗೆ ಆಗಿದೆ ? ಆಸ್ತಿವಂತರಿಗೆ ಅದರ ಉಪಯೋಗವಾಗಿದೆ. ಇವೊತ್ತಿನ ದಿವಸ ಯಾವುದೇ ಕ್ಷೇತ್ರದ ಅಭಿವೃದ್ಧಿ ತೆಗೆದುಕೊಂಡರೂ ಕೂಡ ಅದರ ಉಪಯೋಗ ಉಳ್ಳವರಿಗೆ ಆಗಿದೆ. ನೀರಾವರಿ ಕ್ಷೇತ್ರದಲ್ಲಿ ಅದರ ಉಪಯೋಗ ಭೂಮಾಲೀಕರಿಗೆ ಆಗಿದೆ. ಇವೊತ್ತು ನಮ್ಮ ದೇಶದಲ್ಲಿ ೧೦೦ಕ್ಕೆ ೫೦ಕ್ಕೂ ಹೆಚ್ಚು ಭಾಗ ಒಂದು ಹೊತ್ತಿನ ಊಟಕ್ಕೂ ಇಲ್ಲದೆ ಉಪವಾಸ ಇರುವಂತ ಜನತೆಗೆ ಅಭಿವೃದ್ಧಿ ಕಾರ್ಯಗಳ ಫಲ ಸಿಗುವಂತೆ ಮಾಡಬೇಕಾಗಿದೆ. ಕೂಲಿಕಾರರಿಗೆ ಇದರ ಅನುಕೂಲವನ್ನು ಮಾಡಬೇಕಾಗಿದೆ. ೧ ಎಕರೆ, ೨ ಎಕರೆ ಭೂಮಿ

ಇರತಕ್ಕ ಜನತೆಗೆ ಇದರ ಒಂದು ಉಪಯೋಗವನ್ನು ಒದಗಿಸುವಂತೆ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ಇಂಥ ವಕ್ಕಲುತನ ಕ್ಷೇತ್ರದಲ್ಲಿ ಯಾವ ಯಾವ ಅಧಿಕಾರಿಗಳನ್ನು ಹಾಕಬೇಕೋ. ಅವರನ್ನು ಹಾಕಬೇಕು ಇದರಿಂದ ಕೃಷಿ ಕ್ಷೇತ್ರಕ್ಕೆ ಅತ್ಯಂತ ಉಪಯೋಗವಾಗುತ್ತದೆ ಆ ಮೂಲಕ ರೈತನಿಗೆ ಅನುಕೂಲವಾಗುತ್ತದೆ. ಮಾನ್ಯ ಆಮ್ಲಗಾಂರವರು ಹೇಳಿದಂತೆ ಇದರಲ್ಲಿ ಷೆಡ್ಯೂಲ್ ಕ್ಯಾಸ್ಟ್ ಜನರಿಗೆ ಪ್ರಾತಿನಿಧ್ಯ ಕೊಟ್ಟಿಲ್ಲ. ಇದು ಬಹಳ ದುಃಖದ ಸಂಗತಿ.

ಶ್ರೀ ಕೆ. ಎಚ್. ಶ್ರೀನಿವಾಸ್ —ಹರಿಜನ ಗಿರಿಜನರಿಗೆ ಪ್ರಾತಿನಿಧ್ಯ ಕೊಟ್ಟಿಲ್ಲ, ಅಂದರೆ, ಹಾಕ ಬಾರದು ಎಂದು ಬರೆದಿಲ್ಲ. ಸಾಧಾರಣವಾಗಿ ೪–೫ ಜನ ನೇಮಕ ಮಾಡಿದರೆ, ಅದರಲ್ಲಿ ಒಬ್ಬರನ್ನಾದರೂ ಹರಿಜನ ಗಿರಿಜನರನ್ನು ಹಾಕುತ್ತೇವೆ. ಈಗಾಗಲೇ ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆಂದು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಪಿ. ಪಿ. ಹೆಗರೆ.—ಮಾನ್ಯ ಮಂತ್ರಿಗಳ ಅಭಿಪ್ರಾಯವನ್ನು ಅರ್ಥಮಾಡಿಕೊಂಡಿದ್ದೇನೆ. ಈ ಮಾತನ್ನು ಏತಕ್ಕೆ ಹೇಳಬೇಕಾಯಿತೆಂದರೆ, ಕೆಲವೊಂದು ಪ್ರಸಂಗದಲ್ಲಿ ಸರ್ಕಾರದ ವಿಚಾರ ಇದ್ದರೂ ಕೂಡ ಕಾರ್ಯಗಳು ಆಗುತ್ತಿಲ್ಲ, ಅದಕ್ಕಾಗಿ ಸ್ಪೆಸಿಫಿಕ್ ಆಗಿ ಕಾಣಿಸಿದ್ದರೆ ಹರಿಜನರಿಗೆ ಪ್ರಾತಿನಿಧ್ಯ ಸಿಗುತ್ತದೆ. ಹರಿಜನರಿಗೆ ಹಳೇ ಮೈಸೂರು ಭಾಗದಲ್ಲಿ ಭೂಮಿ ಇರಬಹುದು. ಬಾಂಬೆ ಕರ್ನಾಟಕ ಭಾಗದಲ್ಲಿ ಹರಿಜನರಿಗೆ ಭೂಮಿಯೇ ಇಲ್ಲ. ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನೀರಾವರಿಗೆ ಸಂಬಂಧಪಟ್ಟ ಕಾಲುವೆಗಳನ್ನು ಮಾಡುವಾಗ ಹರಿಜನರಿಗೆ ಸಂಬಂಧ ಪಟ್ಟಂತೆ ೫ ಗುಂಟೆ, ೧೦ ಗುಂಟೆ ೧ ಎಕರೆ ಜಮೀನು ಆ ಕಾಲುವೆ ಭಾಗದಲ್ಲಿ ಬರುವುದಿದ್ದರೆ, ಕಾಲುವೆ ದಿಕ್ಕನ್ನೇ ಬದಲಾಯಿಸುವ ವ್ಯವಸ್ಥೆ ನಡೆದಿದೆ. ಈ ಬಗ್ಗೆ ನನಗೆ ದೂರು ಬಂದಿದೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇನೆ. ಹರಿಜನರಿಗೆ ಇರತಕ್ಕ ಜಮೀನಿನಲ್ಲಿ ನೀರಿನ ಉಪಯೋಗ ಪಡೆದು ಒಂದು ತುತ್ತು ಅನ್ನವನ್ನು ಸಂಪಾದನೆ ಮಾಡುವುದಕ್ಕೂ ಇವತ್ತು ಬಿಡುತ್ತಿಲ್ಲ. ಇಂಥ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಸೂಕ್ತವಾದಂಥ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಫಂಕ್ಷನ್ ಆಫ್ ದಿ ಅಥಾರಿಟಿಯಲ್ಲಿ ಹಾಕಿರುವುದನ್ನು ನೋಡಿದರೆ, ನಾವು ಕೆನಡಾ, ಅಮೆರಿಕಾ ದೇಶಗಳು ಯಾವ ಮಟ್ಟದಲ್ಲಿ ದುಡಿಯುತ್ತಿವೆ, ಆ ಮಟ್ಟದಲ್ಲಿ ದುಡಿಯುವ ರೀತಿಯಲ್ಲಿ ಹಾಕಿದ್ದಾರೆ. ರೈತರಿಗೆ ಪ್ರೋತ್ಸಾಹ ಮಾಡಿಕೊಡುವ ದೃಷ್ಟಿಯಿಂದ ಯೋಜನೆಗಳನ್ನು ಮಾಡಿದ್ದಾರೆ. ನಾನು ತಿರುಗಿ ತಿರುಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಚ್ಚುಕಟ್ಟು ಪ್ರದೇಶದಲ್ಲಿ ತಾವು ಯಾವ ಅಭಿವೃದ್ಧಿ ಕೆಲಸ ಮಾಡಿದರೂ ಕೂಡ ಅದರ ಫಲ ಜಮೀನ್ದಾರರಿಗೆ ಸಿಗುತ್ತದೇ ಎರಡು ಎಕರೆ ಒಳಗೆ ಇರತಕ್ಕ ಚಿಕ್ಕ ಹಿಡುವಳಿದಾರರು ಏನು ಇದ್ದಾರೆ, ಇವತ್ತು ಇವರು ೧೦೦ಕ್ಕೆ ೭೦ ಪರ್ಸೆಂಟ್ ಇವರೇ ಇದ್ದಾರೆ. ಇಂಥ ಚಿಕ್ಕ ಹಿಡುವಳಿದಾರರ ಸಂರಕ್ಷಣೆ ಮಾಡುವುದಕ್ಕ ಸರ್ಕಾರ ಆದ್ಯ ಗಮನ ಕೊಡಬೇಕೆಂದು ನಾನು ಹೇಳುತ್ತೇನೆ. ಚಿಕ್ಕ ಹಿಡುವಳಿದಾರರ ಬಗ್ಗೆ ಅಚ್ಚುಕಟ್ಟು ಪ್ರದೇಶದಲ್ಲಿ ಯಾವರೀತಿಯ ಪ್ರಗತಿ ಕಾರ್ಯಗಳಿಗೆ ಸಾಲ ಮತ್ತಿತರ ಸೌಲಭ್ಯಗಳನ್ನು ಒದಗಿಸಿದರೂ ಅದನ್ನು ಸರ್ಕಾರದ ಫಂಡಿನಿಂದ ಮಾಡ ಬೇಕೆಂದು ಹೇಳುತ್ತೇನೆ. ಸ್ಟೇಟ್ ಗೌರ್ನಮೆಂಟ್ ಫಂಡನಿಂದ ಆ ಖರ್ಚುಗಳನ್ನು ಕೊಡಬೇಕೆಂದು ಹೇಳಿದರು. ಎರಡು ಎಕರೆ ಒಳಪಟ್ಟ ಇರತಕ್ಕ ಜಮೀನು ಮಾಲೀಕರ ಸಂರಕ್ಷಣೆಯನ್ನು ಸಂಪೂರ್ಣ ವಾಗಿ ಸರ್ಕಾರ ವಹಿಸಿಕೊಳ್ಳಬೇಕು. ಇವತ್ತು ರಾಷ್ಟ್ರದ ಮುಂದೆ ಇವತ್ತು ಪ್ರಶ್ನೆ ಇರತಕ್ಕದ್ದು, ಚಿಕ್ಕ ಹಿಡುವಳಿದಾರರನ್ನು ಯಾವರೀತಿ ಬದುಕಿಸಬೇಕು ? ಕೂಲಿಕಾರರಿಗೆ ಹೇಗೆ ಬದುಕಿಸಬೇಕು ? ಇವತ್ತು ಇವರ ಒಂದು ಅಭಿವೃದ್ಧಿಯಾಗಬೇಕಾದರೆ ? ಇವರ ಒಂದು ಅಭಿವೃದ್ಧಿಗಾಗಿ ಖರ್ಚು ಮಾಡತಕ್ಕ ಹಣವನ್ನು ಸರ್ಕಾರ ಕೊಡುವಂತಾಗಬೇಕು. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಯಾವುದೇ ರೀತಿಯ ಹೊರೆಯು ಚಿಕ್ಕ ಹಿಡುವಳಿದಾರರ ಮೇಲೆ ಬರದಂತೆ ಎಚ್ಚರ ವಹಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರೆ, ನಾನು ಈಗ ಪಾಶ್ಚಿಮಾತ್ಯ ರಾಷ್ಟ್ರಗಳನ್ನು ಏನು ಉದಾಹರಣೆ ಕೊಟ್ಟಿದ್ದೇನೆ. ಅವರು ಕೃಷಿ ರಂಗದಲ್ಲಿ ಏನು ಸಾಧನೆ ಮಾಡಿದ್ದಾರೆ ಅದೇ ರೀತಿ ನಮ್ಮದೇಶದಲ್ಲಿ ನೀರಾವರಿ ಯೋಜನೆಗಳು ಪೂರ್ಣವಾದ ಮೇಲೆ ಕೃಷಿ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸುತ್ತೇವೆ. ಈಗ ಈ ಬಾಬಿನಲ್ಲಿ ೭೫ ಪರ್ಸೆಂಟ್ ಜನ ಏನು ಕೆಲಸ ಮಾಡುತ್ತಿದ್ದಾರೆ ಅಷ್ಟೇ ಕೆಲಸವನ್ನು ಮುಂದೆ ೩೦–೪೦ ಪರ್ಸೆಂಟ್ ನಷ್ಟು ಜನರೆ ಮಾಡಿ ಹೆಚ್ಚು ಉತ್ಪಾದನೆ ಮಾಡುತ್ತಾರೆ ಎನ್ನುವ ನಂಬಿಕೆ ನನಗೆ ಇರುವುದರಿಂದ ನಾನು ಈ ಒಂದು ಬಿಲ್‌ಗೆ ಸಂಪೂರ್ಣ ಬೆಂಬಲಿಸಿ ಅಧ್ಯಕ್ಷರು ನನಗೆ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. CHAIRMAN.—The House will now rise to meet again after half an hour.

The House rose at thirty Minutes past three of the clock and re-assembled at five Minutes past Four of the Clock.

[MR. SPEAKER IN THE CHAIR]

Supplementary Estimates for 1978-79—Presentation

SRI K. H. RANGANATH. (Minister for Agriculture and Parlimentary Affairs).—

Sir, with your kind permission, I would like to present the Supplementary Estimates for the year 1978-79.

MR. SPEAKER.—Supplementary Estimates for the year 1978–79 presented.

Karnataka Command Areas Development Bill 1979-

Motion to Consider

† ಶ್ರೀ ಸುಧೀಂದ್ರ ಕಸಬೆ (ಕಲಮಲ).—ಸನ್ಮಾನ್ಯ ಸಭಾಧ್ಯಕ್ಷರೇ, ನಮ್ಮ ಸರ್ಕಾರ ಈ ಸಭೆಯ ಮುಂದೆ ತಂದಿರತಕ್ಕ ಈ ಕಮಾಂಡ್ ಏರಿಯಾಸ್ ಡೆವಲಪ್‌ಮೆಂಟ್ ಬಿಲ್, ೧೯೭೯—ಈ ಮಸೂದೆ ಸೂಕ್ತವಾದ ಮಸೂದೆಯಾದ್ದರಿಂದ ನಾನು ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ನಮ್ಮ ರಾಯಚೂರು ಜಿಲ್ಲೆಯ ಪ್ರದೇಶದಲ್ಲಿ ತುಂಗಭದ್ರಾ ಜಲಾಶಯ ಇದ್ದು ಆದರಿಂದ ನೀರಾವರಿಗೆ ಅನುಕೂಲವಾಗಿದೆ. ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಆಥಾರಿಟಿಯ ಮೂಲಕ ಈಗಾಗಲೇ ತಾವು ಇದರಲ್ಲಿ ಹೇಳಿರುವಂತೆ ಅಣೆಕಟ್ ರೋಡ್ಸ್ ಮತ್ತು ಡಿಸ್ಟ್ರಿಬ್ಯೂಟರಿ ರೀಪೇರಿ ಕೆಲಸ ನಡೆಯುತ್ತದೆ. ಇದರಲ್ಲಿ ಅಣೆಕಟ್ಸ್ ರೋಡ್ಸ್ ಬಹಳ ಮಹತ್ವವಾದುದು. ಇದರಿಂದ ನೀರಾವರಿ ಕ್ಷೇತ್ರಕ್ಕೆ ರೈತನಿಗೆ ಬಹಳಮಟ್ಟಿಗೆ ಅನುಕೂಲವಾಗುತ್ತದೆ. ತುಂಗಭದ್ರಾ ಜಲಾಶಯ ನೀರಾವರಿ ಪ್ರದೇಶನಲ್ಲಿ ೩.೮ ಲಕ್ಷಕ್ಕೆ ಸ್ಟ್ಯಾಂಡಿಂಗ್ ಕ್ರಾಪ್ ಇದೆ. ಆದ್ದರಿಂದ ಅಣೆಕಟ್ಟು ರೋಡ್ಸ್ ನಿರ್ಮಾಣ ಕಾರ್ಯವನ್ನು ತೀವ್ರವಾದ ರೀತಿಯಲ್ಲಿ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರನ್ನು ನಾನು ಕೇಳಿಗೊಳ್ಳುತ್ತೇನೆ. ಇದಲ್ಲದೆ ಡಿಸ್ಟ್ರಿಬ್ಯೂಟರಿ ರಿಪೇರಿಗಳು ಮತ್ತು ಲೈನಿಂಗ್ಸ್ ಇದುಕೂಡ ಮಹತ್ವವಾದುದು ಈ ಕೆಲಸ ಆಗದಿದ್ದರೆ ನೀರು ಸುಮ್ಮನೆ ವೇಸ್ಟಾಗಿ ಹೆಚ್ಚಿನ ಭೂಮಿಗೆ ನೀರಿನ ಪೂರೈಕೆಯಾಗುವುದಿಲ್ಲವೆಂದು ನನ್ನ ಅಭಿಪ್ರಾಯ ತುಂಗಭದ್ರಾ ಜಲಾಶಯದ ಎಡದಂಡೆ ಕಾಲುವೆಗೆ ೯೦ ಕೋಟಿ ರೂಪಾಯಿ ಕೊಟ್ಟಿರುವುದನ್ನು ನಾನು ಸ್ವಾಗತಿಸುತ್ತೇನೆ. ರಾಯಚೂರು ತುಂಗಭದ್ರಾ ಜಲಾಶಯ ಪ್ರದೇಶದಲ್ಲಿ ಬ್ಲಾಕ್ ಕಾಟನ್ ಬೆಳೆಯುವ ಪ್ರದೇಶ ೮೦ ಪರ್ಸೆಂಟ್‌ನಷ್ಟಿದೆ. ಅಲ್ಲಿ ಹೆಚ್ಚು ಹತ್ತಿ ಬೆಳೆಯುತ್ತಿದ್ದಾರೆ. ಆದ್ದರಿಂದ ಅಲ್ಲಿ ಒಂದು ಕಾಟನ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಮಾಡಬೇಕಾದ ಅಗತ್ಯತೆ ಇದೆ ಆದರಿಂದ ಈ ಬಗ್ಗೆ ಹೆಚ್ಚು ಆದ್ಯತೆ ಕೊಟ್ಟು ಅಲ್ಲಿ ಕಾಟನ್ ರಿಸರ್ಚ್ ಇನ್‌ಸ್ಟಿಟ್ಯೂಟನ್ನು ನಿರ್ಮಾಣ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇದಲ್ಲದೆ ಹೈಬ್ರಿಡ್ ಥಳಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲು ಅನುಕೂಲವಾಗುವಂತೆ ನಮ್ಮ ಜಿಲ್ಲೆಯಲ್ಲಿ ಕೇಂದ್ರ ಬೀಜೋತ್ಪಾದನೆ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಕಮ್ಯಾಂಡ್ ಏರಿಯಾಪ್ರದೇಶದಲ್ಲಿ ರೈತರು ಗುಡಿಸಲುಗಳನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಆ ಪ್ರದೇಶದಲ್ಲಿ ವ್ಯವಸಾಯ ಮಾಡುತ್ತಿರುವುದರಿಂದ ಅದನ್ನು ನೋಡಿಕೊಳ್ಳಲು ಕ್ಯಾಂಪ್ ನಿರ್ಮಾಣ ಮಾಡಿಕೊಂಡಿದ್ದಾರೆ. ಆದರೆ ಸಂಭಂದಪಟ್ಟ ಅಧಿಕಾರಿಗಳು ಅದಕ್ಕೋಸ್ಕರ ಅವರಿಗೆ ಸಾಕಷ್ಟು ಪೆನಾಲ್ಟಿ ಹಾಕುತ್ತಿದ್ದಾರೆ. ಆದ್ದರಿಂದ ನಾನು ಕೇಳಿಕೊಳ್ಳುವುದೇನೆಂದರೆ ಆ ಪ್ರದೇಶವನ್ನು ನಾನ್ ಅಗ್ರಿಕಲ್ಚರ್ ಎಂದು ಪರಿಗಣಿಸಿ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.